
ಕೊರವಂಜಿ

Koravanji



ಜೂಲೈ

೧೯೫೫

★

ಸಂಪಾದಕರು :

ಶ್ರೀ॥ ರಾ. ಶಿ.

ಬರಹಗಾರರು :

ಶ್ರೀ॥ "ಕೇಫ"

ಶ್ರೀ॥ ಅ. ರಾ. ಸೇ.

ಶ್ರೀ॥ "ಅಷ್ಟಾವಕ್ರ"

ಶ್ರೀ॥ ಸಾರಥಿ

ಶ್ರೀ॥ ಖಾರಾಂತ

ಶ್ರೀ॥ ಕಾಮತ್

ಶ್ರೀ॥ ಈರುವ

ಶ್ರೀ॥ ದೊಡ್ಡತಮ್ಮಯ್ಯ

ಶ್ರೀ॥ ಪಾಟಾಳಿ

ಶ್ರೀ॥ ರಾಮಿ

ಶ್ರೀ॥ ನಾ. ಕಾ.

ಶ್ರೀ॥ ದಾಶರಥಿ ದೀಕ್ಷಿತ್

ಶ್ರೀ॥ ಗುಂಡಯ್ಯ

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿ ಪ್ರತಿ
ಕೇವಲ ನಾಲ್ಕಾಣೆ

ಶೀಘ್ರದಲ್ಲಿಯೇ ನಿಮ್ಮ ನೆಚ್ಚಿನ ಚಿತ್ರಮಂದಿರಗಳಲ್ಲಿ
ಪ್ರದರ್ಶನವನ್ನು ನಿರೀಕ್ಷಿಸಿ!



ಆರ್. ಆರ್. ಪಿಕ್ಸರ್ಸ್‌ರವರ—

ಗುಲೇಬಕಾವಲಿ

(ತಮಿಳು)

ಟಿ. ಆರ್. ರಾಜಕುಮಾರಿ—ಜಿ. ವರಲಕ್ಷ್ಮಿ

ಎಂ. ಜಿ. ರಾಮಚಂದ್ರನ್

★

ಆಕರ್ಷಕವಾದ ಕಥಾವಸ್ತು, ಮನರಂಜಕ ಸಂಗೀತ ಮತ್ತು
ನೃತ್ಯಗಳಿಂದ ಕಂಗೊಳಿಸುವ ಸುಂದರ ಚಿತ್ರ.

A VIJAYA TALKIE RELEASE



ಮುಂದಿನ ಬದಲಾವಣೆ:

ಮೈಸೂರು: ಚಾಮುಂಡೇಶ್ವರಿ ಕೆ. ಜಿ. ಎಫ್. ಒಲಂಪಿಯ


...ಖಂಡಿತವಾಗಿಯೂ ನಂಬಲರ್ಹವಾದ...
...ನೋಡಲು ಅಂದವಾಗಿರ ಬೇಕಾದಲ್ಲಿ...
...ಒಳಭಾಗದಲ್ಲಿಯೂ ಮತ್ತು ಹೊರಭಾಗದಲ್ಲಿಯೂ ಉಪಯೋಗಿಸಬೇಕಾದಲ್ಲಿ...
...ಬಣ್ಣಗಳು ಮಿರುಗುತ್ತಿರಬೇಕಾದಲ್ಲಿ...
...ಸಂದೇಹವೇ ಇಲ್ಲ, ಇವುಗಳಿಗೆಲ್ಲಾ ಒಂದೇ ಉತ್ತರ ... ಅತ್ಯುತ್ತಮವಾದ
ಶಾಲಿಮಾರ್ ಸೂಪರ್‌ಲ್ಯಾಕ್
ಬ್ರಷ್ಷಿನಿಂದ ಬಳಿಯಬಹುದು, ಸ್ಪ್ರೇ ಮಾಡಬಹುದು ಅಥವಾ ಬಣ್ಣದಲ್ಲಿ ಅದ್ದಲೂಬಹುದು, ಆಗಿಂದಾಗ್ಗೆ ತೊಳೆದರೂ ಬಣ್ಣ ನಿಲ್ಲುವುದು, ಪ್ರಕಾಶಮಾನವಾದ 38 ಶ್ರೇಷ್ಠ ಬಣ್ಣಗಳಲ್ಲಿ ದೊರಕುವವು.

ಕೊರವಂಜಿ

A. ANANTHIAH.

ಸಂಪುಟ ೧೪ ಜೂಲೈ ೧೯೫೫ ಸಂಚಿಕೆ ೪

ಕುಹಕಿಡಿಗಳು

ಭಾರತದ ಪ್ರಧಾನಮಂತ್ರಿಗಳ ಪ್ರವಾಸದ ಪ್ರಯುಕ್ತ ಎಲ್ಲಾ ಮಂತ್ರಿಗಳೂ ಪ್ರವಾಸಗೊಂಡು, ಸೆಕ್ರೆಟೇರಿಯಟ್ಟಿಗೆ ಆ ಕಾಲದಷ್ಟೂ ರಜೆ ಎಂಬುದು ಕುಹಕದ ಸುದ್ದಿಯಷ್ಟೆ!

* * *

ಶ್ರೀ ದೇಶಮುಖರು ಅವರ ಬಾಲ್ಯ ಗುರುಗಳಿಗೆ ಸಾಷ್ಟಾಂಗಮಾಡಿದಾಗ ಗುರುಗಳು ಅತ್ತರಂತೆ.

—ನಿನಗೆ ತೆರಿಗೆ ಕೊಡುವಷ್ಟು ಸಂಬಳ ನನ್ನ ಜೀವಮಾನದಲ್ಲೇ ಬರಲಿಲ್ಲವಲ್ಲಾ! ಶಿಷ್ಯದಕ್ಷಿಣೆ ಕೊಟ್ಟು ಈ ಕಾಲದಲ್ಲಿ ಕೃತಾರ್ಥನಾಗೋಣ ಅಂದರೆ ಆಗಲಿಲ್ಲವಲ್ಲಾ!" ಎಂದು.

* * *

ಅಮೃತ್‌ಸರ್ ಕಾಂಗ್ರೆಸ್ ಅಧಿವೇಶನಕ್ಕೆ ಮಾ॥ ಬಲ್ಗನಿನ್ ಅವರನ್ನು ಆಹ್ವಾನಿಸುತ್ತಾರಂತೆ.

—ಐಕ್ ಐಸೆನ್‌ಹೋವರನ್ನೂ ಆಹ್ವಾನಿಸಿದರೆ ಶಿಖರ ಸಮ್ಮೇಳನವೂ ನಡೆಯಬಹುದೇನೋ!!

* * *

ನೂತನ ಲಕ್ಷಾಧಿಪತಿಗಳ ಮನೆಯಲ್ಲಿ ನೂತನವಾಗಿ ಕೊಂಡ ಜಾತಿನಾಯಿ ಮರಿಗೆ ಒಬ್ಬ ದಾದಿ, ಒಬ್ಬ ಜವಾನನನ್ನು ಏರ್ಪಡಿಸಲಾಗಿದೆಯಂತೆ.

—ನಾಯಿಪಾಡು! ಪಾಪ!! ಅದಕ್ಕೆ!!!

* * *

ಗೋವಾ ಗಲಭೆಯ ಮುಕ್ತಾಯಕ್ಕಾಗಿ, ಕೊರಿಯಾದಿಂದ ನಿಯೋಗವನ್ನು ಬೇಕಾದರೆ ಕಳಿಸುತ್ತೇವೆ, ವಿನಿಮಯರೂಪವಾಗಿ, ಎಂದು ಅಮೆರಿಕನ್ನರು ಇನ್ನೂ ಹೇಳಿಲ್ಲವಂತೆ.

* * *

ಒಂದೇ ರಾತ್ರಿಯಲ್ಲಿ ಈ ಕಾದಂಬರಿಯನ್ನು ಮುಗಿಸಿದೆ ಎಂದು ಲೇಖಕರು ಹೇಳಿಕೆ ಇತ್ತಿದ್ದಾರಂತೆ.

—ರಾತ್ರಿ ಬರೆದ ಕಾದಂಬರಿ ನಮಗೂ ಗೊತ್ತು – ಆಗಲೇ ನಾವು ಓದಿದ್ದು!

* * *

ಈ ಫೈಲಿನಮೇಲೆ “ಟಾಪ್ ಪ್ರೈಯಾರಿಟಿ”, “ಅರ್ಜೆಂಟ್”, “ವೆರಿ ಅರ್ಜೆಂಟ್” ಇತ್ಯಾದಿ ಯಾವ ಗುರುತೂ ಇಲ್ಲದ್ದರಿಂದ, ಇದರಲ್ಲೇನೋ ಅತಿ ಸೂಕ್ಷ್ಮವಿರಬೇಕು ಎಂದು ಸೆಕ್ರೆಟೇರಿಯಟ್ಟಿನಲ್ಲಿ ಬೇಗ ಇತ್ಯರ್ಥಮಾಡಿದರೆಂಬುದು ಸುಳ್ಳಂತೆ.

* * *

ಅರ್ಧಗಂಟೆ ಕೆಮ್ಮಣ್ಣನ್ನು ಮೆತ್ತಿಕೊಂಡರೆ ಮುಖದ ಕಾಂತಿ ಇಮ್ಮಡಿಯಾಗುತ್ತದೆ ಎಂದು ಮಹಿಳಾಪತ್ರಿಕೆಯಲ್ಲಿ ಸೂಚಿಸಲ್ಪಟ್ಟಿದೆಯಂತೆ.

—ಕೆಲವು ಹೆಂಗಸರ ಮುಖ ಏಕೆ ಹೀಗಿದೆ ಎನ್ನುವುದು ಈಗ ಅರ್ಥವಾಯಿತು!

* * *

ಸಂಸ್ಕೃತಿಪ್ರಸಾರ ಸಭೆಯಲ್ಲಿ ಅಧ್ಯಕ್ಷರು ಹೆಚ್ಚುಹೊತ್ತು ಭಾಷಣಮಾಡಬೇಕೋ ಭಾಷಣಕಾರರೋ ಎಂಬ ವಾಗ್ವಾದವು ಸ್ವಲ್ಪಮಟ್ಟಿಗೆ ಕೈಕೈಮಿಲಾಯಿಸುವ ಮಟ್ಟಿಗೆ ನಡೆಯಿತಂತೆ.

* * *

ಶಾಲೆಯಲ್ಲಿ ಹುಡುಗರು ನಿದ್ರೆಮಾಡೋದು ನ್ಯಾಯ; ಮೇಷ್ಟರು ನಿದ್ರೆ ಮಾಡೋದು ಸಹಜ.

—ಆದರೆ ನೋಡಿ ಸಾರ್! ಕಾಲ ಕೆಟ್ಟುಹೋಯ್ತು! ಇನ್ಸ್‌ಪೆಕ್ಟರೂ ನಿದ್ರೆ ಮಾಡುತ್ತಾರಲ್ಲಾ, ಇನ್ಸ್ಪೆಕ್ಷನ್‌ಮಾಡೋವಾಗ”

ಎಂದು ಒಬ್ಬರು ಬಾಷ್ಪಾಂಜಲಿ ಸುರಿದು ಬರೆದಿದ್ದಾರೆ.

* * *

ಉರಿಗಾಳು

ಗಾಂಧಿಟೋಪಿಗೆ ರಷ್ಯಾದಲ್ಲಿ ಅಸಾಧಾರಣವಾದ ಬಹುಮಾನ ದೊರೆಯಿತು (ಸುದ್ದಿ) .... ಇದೂ ಒಂದು ತರಹ ಟೋಪಿ ಅಲ್ಲ, ತಾನೆ?

* * *

ಮದ್ರಾಸ್ ನಗರದ ಮಹಿಳೆಯರನ್ನು ವಿಚಾರಿಸಲಾಗಿ, ಅವರು ತಮಗೆ ಒಂದು ಗಂಡು, ಒಂದು ಹೆಣ್ಣು, ಎರಡೇ ಎರಡು ಮಕ್ಕಳು ಸಾಕು, ಎಂದರು... ....ಗಂಡಿಗೆ ಸಿಕ್ಕಿದ ವರದಕ್ಷಿಣೆಯಿಂದ ಮಗಳ ಮದುವೆಗೂ ವರದಕ್ಷಿಣೆ ಒದಗಿಸಬಹುದೆಂಬ ಪಿತೂರಿ ಇದು.

* * *

ರಾಮೇಶ್ವರದ ಹೈಸ್ಕೂಲಿಗೆ ಯಾವ ಮಂತ್ರಿ ಕಲ್ಲು ಹಾಕುವುದು, ಎಂಬ ಸಮಸ್ಯೆಯನ್ನು ಬಗೆಹರಿಸಲಾರದೆ, ಮೊನ್ನೆ ...ಸ್ಕೂಲಿಗೇ ಕಲ್ಲು ಹಾಕಿದರಂತೆ.

* * *

ಇಂಗ್ಲೆಂಡಿನ ಆರೋಗ್ಯ ಇಲಾಖೆಯವರು, ಊಟವಾದಮೇಲೆ ಮಧುರ ಪದಾರ್ಥಗಳನ್ನು ತಿನ್ನುವುದೊಳ್ಳೆಯದು, ಎಂದು ಘೋಷಿಸಿದಾರೆ........ಮಧುರೇಣ ಸಮಾಪಮೇತ್.

* * *

ಚೈನಾದೇಶದ ಪ್ರಧಾನಮಂತ್ರಿ ಚೌಎನ್‌ಲೈ ಅವರು ತಬಲ ಬಾರಿಸಿದರಂತೆ.... ಆದರೆ, ಅವರ ಕೈ ಎಡದಮೇಲೆಯೇ ಹೆಚ್ಚು ಆಡಿತಂತೆ.

* * *

ನೆಹರು ಅವರು ರಷ್ಯಾಗೆ ಹೋದಾಗ ಅಮೇರಿಕನ್ನರಿಗೆ ಆದ ಭಯಕ್ಕಿಂತ, ಬುಲ್ಗಾನಿನ್ ಇಂಡಿಯಾಗೆ ಬರುವ ಸುದ್ದಿ ಕೇಳಿ, ಅಮೇರಿಕನ್ನರಿಗೆ ಭಯವಾಗಿದೆಯಂತೆ.

* * *

ಶಾಂತಿಯುತ ಸಹಜೀವನಕ್ಕೆ ಅತ್ಯಗತ್ಯವಾಗಿ ಬೇಕಾದದ್ದು ಶಾಂತಿಯುತ ಸಹ ಶಿಕ್ಷಣವೆಂದು ವಿಶ್ವವಿದ್ಯಾಲಯದವರು ಈಗ ಮನಗಂಡಿದ್ದಾರಂತೆ.

* * *

*

ಚಕ್ರವರ್ತಿ ರಾಜಗೋಪಾಲಾಚಾರಿಯವರಿಗೆ ಈಚಿನ ಸೂರ್ಯಗ್ರಹಣದಿಂದ ಯಾವ ಬಾಧಕವೂ ಆಗಲಿಲ್ಲವಂತೆ....೩೦ ವರ್ಷದಿಂದ ಅವರು ಕರೀ ಕನ್ನಡಕವನ್ನೇ ಧರಿಸುತ್ತಿರುವುದರಿಂದಿರಬೇಕು.

*　　*　　*

ವರ್ಷವೊಂದಕ್ಕೆ ೧೦೦, ೧೫೦ ಕೋಳಿಮೊಟ್ಟೆಗಳನ್ನು ಹಾಕುವ "ಮದ್ರಾಸ್ ನೀಲಿ" ಎಂಬ ಕುಕ್ಕುಟಜಾತಿಯೊಂದನ್ನು ಈಗ ತಯಾರಿಸಿದಾರೆ....ಹಲವು ಪರೀಕ್ಷಕರು ಇದಕ್ಕಿಂತ ಸಮರ್ಥರು, ಎಂದೂ ವಿದ್ಯಾರ್ಥಿಗಳು ಹೇಳುತ್ತಿದಾರೆ.

*　　*　　*

ಫಿಲಿಪ್ಪೈನ್ ದ್ವೀಪಗಳಿಗೆ ಭಾರತದಿಂದ ಹಲವು ಎಮ್ಮೆಗಳು ಮೊನ್ನೆ ಹಡಗು ಹತ್ತಿದುವು .. ಸಾಂಸ್ಕೃತಿಕ ನಿಯೋಗಕ್ಕೆ ಈ ಹೆಸರು ಹೇಳುವುದು ಉಚಿತವಲ್ಲ.

*　　*　　*

ಮುಂದಿನ ಮಹಾ ಚುನಾವಣೆಗಳಿಗೆ ಯಾರು ಯಾರು ಉಮೇದುವಾರರು. ಎಂಬುದನ್ನು ಈಗಲೇ ಕಾಂಗ್ರೆಸ್‌ಪಕ್ಷ ತೀರ್ಮಾನಿಸುವುದಂತೆ ....ಅದರ ವಿಷಯದ ವಾಗ್ವಾದಗಳಿಗೆ ಎರಡು ವರ್ಷಗಳಾದರೂ ಬೇಕೇ ಬೇಕು.

*　　*　　*

ಮುಂದಿನ ಚುನಾವಣೆಗಳು ಮುಗಿಯುವತನಕ ಯಾವ ಹೊಸ ಕಂದಾಯವನ್ನೂ ಜನರಮೇಲೆ ಹೇರಲು ನಾವು ಸಿದ್ಧರಿಲ್ಲವೆಂದು ಮದ್ರಾಸ್ ಮಂತ್ರಿಮಂಡಲ ಘೋಷಿಸಿದೆ ....ಚುನಾವಣಾ ಭಾಷಣಗಳಮೇಲೆ ಹಾಕಬಹುದಲ್ಲಾ.

*　　*　　*

ಪದವೀಧರ ವಿದ್ಯಾರ್ಥಿಗಳು ಗ್ರಾಮಸೇವೆಗಾಗಿ ಹಳ್ಳಿಗಳಲ್ಲಿ ಒಂದು ವರ್ಷ ಕಡ್ಡಾಯವಾಗಿ ನೆಲೆಸುವುದರಿಂದ ಹಳ್ಳಿ ಜನರಲ್ಲಿ ಸಿಗರೇಟ್ ಸೇದುವ ಅಭ್ಯಾಸ ಹರಡಬಹುದೆಂದು ಸಿಗರೇಟ್ ತಯಾರಿಸುವ ಕಂಪನಿಯವರು ಎಣಿಕೆ ಹಾಕುತ್ತಿರುವರಂತೆ.

*　　*　　*

ಚಕ್ರಬಂಧ ಸ್ಪರ್ಧೆಗಳನ್ನು ತಡೆಗಟ್ಟುವುದರಿಂದ ನಮ್ಮ ದೇಶದ ಜ್ಯೋತಿಷ್ಯ ಪ್ರವೀಣರಿಗೆ ದೊಡ್ಡ ಪೆಟ್ಟು ಕೊಟ್ಟಂತಾಗಿದೆಯಂತೆ; ಟಪಾಲ್ ಇಲಾಖೆಗೂ ಇದರಿಂದ ಭಾರಿ ನಷ್ಟ ಸಂಭವಿಸುವುದೆಂದು ತಜ್ಞರು ಹೇಳುತ್ತಿದಾರೆ.

*　　*　　*

—— ೦ ——

"ರಷ್ಯಾಪ್ರವಾಸ"

ವಿಭೀಷಣ ಶ್ರೀರಾಮನ ಕ್ಯಾಂಪಿಗೆ ಬಂದಾಗ ಕೂಡ, ಪಂ|| ನೆಹ್ರೂ ಅವರಿಗೆ ರಷ್ಯಾದಲ್ಲಿ ಸಿಕ್ಕಿದಂತಹ ಸ್ವಾಗತ ದೊರೆಯುಲಿಲ್ಲವಂತೆ.

—ಹೀಗೆಂದು ನಮ್ಮ ವಾಲ್ಮೀಕಿ ಹುತ್ತದ ಒಳಗಿಂದಲೇ ಹೇಳಿದನಂತೆ!!

* * *

ರಷ್ಯಾದಲ್ಲಿ ನೆಹ್ರೂಜೀಯವರ ಅಚ್ಚಿನ್ನ ಭಕ್ತನಂತೆ ಓಡಾಡುತ್ತಿದ್ದವರು ಯಾರು ಗೊತ್ತೆ?

—ಅಮೇರಿಕಾದ ರಾಯಭಾರಿ!!

* * *

ಅಮೇರಿಕಾದ ರಾಯಭಾರಿ ಐಸೆನ್‌ಹೋವರ್ ಮತ್ತು ಆವನ ಮನರಕ್ಷಕ ಶ್ರೀ ಡಲ್ಲೆಸರಿಗೆ ಏನೆಂದು ಕಾಗದ ಬರೆದ ಗೊತ್ತೇ?

—ಏನಾದರೂಮಾಡಿ ಕ್ರಿಸ್‌ಮಸ್ ಹೊತ್ತಿಗಾದರೂ ಪಾಕಿಸ್ಥಾನದಿಂದ ಮಹಮ್ಮದ್ ಆಲಿಗೆ ರಷ್ಯಾಪ್ರವಾಸ ಏರ್ಪಡಿಸಲೇಬೇಕು" – ಅಂತ.

* * *

ಮಾ|| ಟೈಟೋ ಮತ್ತು ಪಂ|| ನೆಹ್ರೂ ಅವರು ಪಂಚಶೀಲ ಪ್ರಕಟವಾದಮೇಲೆ ರಷ್ಯಾದವರು ಟೈಟೋ ಜತೆಯಲ್ಲಿ ಸಂಧಾನ ನಡೆಸಿದರು – ಯಶಸ್ವಿಯಾಗಿ – ನೆಹ್ರೂ ರಷ್ಯಾಪ್ರವಾಸದ ಮುನ್ನ.

* * *

ಪತ್ರಿಕೋದ್ಯಮಿಗಳ ಸಮ್ಮೇಳನದಲ್ಲಿ ಚಿಯಾಂಗ್ ಕೈಷೇಕನನ್ನು ಯಾವಾತನೊ ಕೇಳಿದನಂತೆ— ಈಗ ನೆಹ್ರೂ ಎಲ್ಲಿದಾರೆ! ನಿಮ್ಮ ಅಭಿಪ್ರಾಯವೇನು" ಎಂದು.

—ಆತ ಅಂದನಂತೆ – ನೆಹ್ರೂ ಯಾರು? ಎಂದು.

—ಬೊಂಬಿನ ಹಂದರದ ಹಿಂದೆಯೇ ಯಾರೋ ಹೆಂಗಸರು ನಕ್ಕರಂತೆ

* * *

ರಷ್ಯಾಪ್ರವಾಸದ ಚಿತ್ರಗಳನ್ನು ನೋಡಿದ ಈಡನ್ನರ ಹೊಸ ಹೆಂಡತಿ ಹೇಳಿದ ಳಂತೆ ಗಂಡನಿಗೆ—"ಪ್ರಿಯತಮಾ! ನೀನು ಗಾಂಧೀಟೋಪಿ ಹಾಕಿಕೊಂಡಿದ್ದನ್ನು ನೋಡಬಯಸುತ್ತೇನೆ" ಎಂಬುವ ಸುದ್ದಿ ಸುಳ್ಳಂತೆ.

* * *

"ಭಾರತದಲ್ಲಿ" ರಷ್ಯಾಪ್ರವಾಸದ ಸುದ್ದಿಗಳು

ಪಂ॥ ನೆಹ್ರೂ ಅವರನ್ನು ಯು. ನೋ. ಸಂಸ್ಥಾನದ ಪ್ರಧಾನ ಮಂತ್ರಿಗಳನ್ನಾಗಿ ಭೂಲೋಕ ರಾಷ್ಟ್ರಗಳು ನಿಯಮಿಸಬೇಕು.

—ಆಗಲಾದರೂ ಭಾರತದ ಪ್ರಧಾನಮಂತ್ರಿ ಭಾರತದ ಏಳಿಗೆಗೆ ದುಡಿಯಲು ಸಾಧ್ಯವಾಗಬಹುದು, ಎಂದು ಲೋಕಸಭೆಯ ಒಂದು ಪಕ್ಷದವರು ಹೇಳಿದರೆಂಬುದು ಸುಳ್ಳಂತೆ.

* * *

ರಷ್ಯಾಪ್ರವಾಸಕ್ಕೆ ಹೋದಾಗ, ಪಂ॥ ನೆಹ್ರೂ ಅವರಿಗೆ ದಿನಾಲೂ ಧರಿಸಲು ನಾವೇ ಗಾಂಧಿಟೋಪಿಯನ್ನು ಇಸ್ತ್ರಿಮಾಡಿ ಹಾರೋಪ್ಲೇನಿನಲ್ಲಿ ಕಳಿಸುತ್ತಿದ್ದೆವು ಎಂದು ಎಲ್ಲಾ ಅಗಸರ ಅಂಗಡಿಗಳೂ ಭಾರತದಲ್ಲಿ ಜಾಹೀರಾತು ಮಾಡಿಲ್ಲವಂತೆ—ಇಂದಿನತನಕ.

* * *

ರಷ್ಯಾವಿಗೆ ನಮ್ಮ ಪ್ರಧಾನ ಸಚಿವರು ಪ್ರವಾಸಮಾಡಿದಾಗಿನಿಂದ ಭಾರತದ ಎಲ್ಲಾ ಸರ್ಕಸ್ಸುಗಳಲ್ಲೂ 'ಸಿಂಹ'ದ ಬದಲು, ಕರಡಿಯ ಆಟಗಳನ್ನೇ ಪ್ರದರ್ಶಿಸುತ್ತಾರೆಂಬುದು ದಿಟವಲ್ಲವಂತೆ.

* * *

ಎಲ್ಲಾ ದೇಶಗಳ ದನಗಳನ್ನೆಲ್ಲಾ ಕಾದು, ತನ್ನ ದೇಶದ ದನಗಳನ್ನು ಮರೆತು, ದೊಡ್ಡ ಗೌಡ ಎನ್ನಿಸಿಕೊಂಡ, ಎಂಬ ಗಾದೆ ಬಲು ಕುಹಕವಿದ್ದಂತೆ – ಯಥಾರ್ಥವಲ್ಲವಂತೆ— ! !

* * *

ಹಾದಿಯಲ್ಲಿ ಕೇಳಿಸಿದುದು :

"ನನ್ನ ಪೆನ್‌ಷನ್ ದುಡ್ಡೂ, ನನ್ನ ಹೋಲ್‌ಲೈಫ್ ಪಾಲಿಸೀ ದುಡ್ಡೂ ಒಟ್ಟಿಗೇ ಬರೋಹಾಗ್ಯಾಗುತ್ತೆ—ಅದುವರಿಗೂ ಜೀವನಕ್ಕೆ ಯಾವುದಾದರೂ ಕೆಲಸ ನೋಡ್ತಾ ಇದ್ದೇನೆ ರಾಯರೆ!"

— "ಕೇಫ".

★ ತಲ್ಲಣಿಸದಿರು ★

ರಾಗಃ ಕ್ರೋಧವರ್ಧಿನಿ.　　　　ತಾಳಃ ಬೇತಾಳ.

ತಲ್ಲಣಿಸದಿರು ಕಂಡ್ಯ ಹಾಳುಮನುಜ
ಎಲ್ಲರೂ ಸಾಯುವರು ಇದಕೆ ಸಂಶಯವಿಲ್ಲ　　|| ಪ ||

ಸುಟ್ಟಹೀರೋಷಿಮಾದ ಕಿಯೊಷಿಕಿಕ್ಕವನಿಗೆ
ಸುಟ್ಟಮೋರೆಯನು ತಂದಿಟ್ಟವರದಾರೋ
ಹುಟ್ಟಿಸಿದದೇವನೇ ಹುಲ್ಲಮೇಯುತಿರಲು
ಕೆಟ್ಟಮನುಜನೆ ನಿನ್ನ ಕೇಳುವರು ಯಾರೊ?　　|| ೧ ||

ನ್ಯಾಟೋ, ಸೀಟೋಗಳಲಿ ತರಲೆ ತೆಗೆದವರಾರು
ಮೋಟ್ಸೆಟಂಗಗೆ ಪಟ್ಟಕಟ್ಟಿದವರಾರು
ಗ್ವಾಟೆಮಾಲವನುಂಗಿ ನೀರುಕುಡಿದವರಾರು
ಕಾಟವಿದಕೊಳಗಳವುಬಹುದು ಸಂಶಯುವಿಲ್ಲ　　|| ೨ ||

ಶಾಂತಸಾಗರದ ಮೀನುಗಳ ಕೊಂದವರಾರು
ಚಿಂತೆಯೇತಕೆ ಬದುಕು ಸ್ಥಿರವಲ್ಲವು
ಭ್ರಾಂತಿಯನು ಬಿಡು ಹೈಡ್ರೊಜನ ಬಾಂಬದೇವನೇ
ಅಂತ್ಯವನು ತಂದಿಡುವನಿದಕೆ ಸಂಶಯುವಿಲ್ಲ.　　|| ೩ ||

— ಅ. ರಾ. ಸೇ.

ಉ ಪ ಮೆ

ಎಂತಿರ್ಪುದು ರಾಗಿಮುದ್ದೆ ಮೇಲೆ
ಸಣ್ಣಕ್ಕಿ ಅನ್ನದ ತುತ್ತು :
ಅಂತೆಯೇ ಸೂಗಿಪುದು ಕರಿ ತುಟಿಮೇಲೆ
ಚಿಣ್ಣ ಬಿಳಿಯುನ ಮುತ್ತು.

— "ಅಷ್ಟಾವಕ್ರ".

ಅರಂಗೇತ್ರಂ

ಧೈ ಥಕ ಧೈ ಥಕ, ತಕ ಧೈ ಧೈ
ಕುಣಿದಳು ಕೋಮಲೆ, ಮರಿಯಾನೆ, ...ಅಟ್ಟದಮೇಲಿನ ಬೆಟ್ಟದ ಕುಟ್ಟಿ!
ಕಾಲುತಾಳ, ಅರ್ಧತಾಳ, ತಾಳ ತಾಳ ಹೊಟ್ಟೆಗೆ!
ತುಂಬುಸಭೆ ಇಂಬುಗೊಂಡು ಕೊಂಬುಕಹಳೆ ಊದಿತು
ಊದಲಾರಳಿನ್ನು ಆ ಹುಡುಗಿ, ಪಾಪ, ಕೋಮಲೆ
ಇನ್ನು ಊದೆ, ಚೂರುಚೂರು... ಸೂರುತನಕ ನೆಗೆದಳು
ನೆಗೆದು ಬಿದ್ದು ಹೋಗಲಿವಳ ಕಥಕಳಿಯ ಕುಣಿತವೆಂದು
ಕಲಾವಿದರು ಕೊಲಾವಿದರಂತೆ ಕೂಗೆ, ಕೋಪದಿ
ಗೂಗೆಗಣ್ಣನರಳಿಸುತ್ತ, ಸೆರಗ ಹಿಡಿದು ಸುತ್ತುತ,
ಕುಪ್ಪಳಿಸಿದಳು, ಅಪ್ಪಳಿಸಿದಳು,
ಜಡೆಯನಾಚೆ ಈಚೆ ತೂಗಿ, ಜಂಭದಿಂದ ಠೀವುತ,
ಶಿರವಬಾಗಿ, ಕರವನೀಡಿ, ಕೆನ್ನೆಮೇಲೆ ಬೆರಳನಿರಿಸಿ,
ಧಧಿಕಿಣ್ಣತ್ತೋಂ, ತದಿಕಿಟ, — ಧಧಿಕಿಣ್ಣ, ಧಧಿಕಿಣ್ಣ.
ಎನ್ಕೈವಿಟ್ಟೋಡಾಡೆಡಾ, ಎಂದು ಸಭೆಯ ಬೇಡುತಾ
ನೃತ್ಯಕಲಾವಿದೆ, ಸಿನಿಮಾತಾರೆ,
ಕನ್ನಡಪವಲೊವ, ಕುಣಿವಳು ರಭಸದಿ
ಅಯ್ಯೊ, ಅಪ್ಪ, ನಿಟ್ಟುಸಿರದುವಿ
ಒಂಭತ್ತುವರ್ಷದ ಬೇಬೀ ಸ್ಟಾರು
ನೋಡಿದರೆಲ್ಲರು, ಪರಸ್ಪರ ಮುಖವನು,
ವೇ ಔಟ್ ಬಾಗಿಲನು.

— ಸಾರಥಿ.

"ಕ್ಯಾಶ್ಮೀರ್ ಪ್ರಿನ್ಸೆಸ್"ನ ಜಾತಕ ಈಗ ನಿಖರವಾಗಿ ಬರೆಯಲ್ಪಟ್ಟಿದೆಯಂತೆ.

*　　*　　*

ಇಂಗ್ಲೆಂಡಿನಲ್ಲಿ ಈರ್ಡ್ ಪಾರ್ಟಿ ಗೆದ್ದಿತು ಎಂದು ಅಮೇರಿಕಾದಲ್ಲಿ ಹಬ್ಬವನ್ನು ಆಚರಿಸಿದರೆಂಬುದು ಸುಳ್ಳಂತೆ.

*　　*　　*

ನಿಮಗೂ ಕನ್ನಡ ಅರ್ಥಕೋಶ

ಅದ್ಭುತ ದಿಗ್ದರ್ಶನ	:	ಹಾಲಿವುಡ್ ಚಿತ್ರದ ಅನುಕರಣ.
ಅಮೋಘ ಪ್ರಾರಂಭ	:	ಪ್ರಾರಂಭ.
ಐತಿಹಾಸಿಕ ಚಿತ್ರ	:	ಹೊಸ ಇತಿಹಾಸವನ್ನೊದಗಿಸುವ ಚಿತ್ರ
ಕಥಾ ಕರ್ತೃ	:	ಸಿನಿಮ ಪ್ರಪಂಚದ ಅತ್ಯಂತ ಶೋಚನೀಯ ವ್ಯಕ್ತಿ.
ದಿಕ್ಕಿರದ ಪ್ರೇಕ್ಷಗಣ	:	ಕಾಸು ಕಳೆದುಕೊಂಡು, ಪೇಚಾಡುತ್ತ, ಹಲ್ಕಿರಿವ ಚಿತ್ರ ಪ್ರೇಮಿಗಳು.
ಛಾಯಾಗ್ರಹಣ	:	ಸ್ವರೂಪನಾಶನ.
ತಾರಾಗಣ	:	ಚಿತ್ರದಲ್ಲಿ ನಟಿಸಿರುವ ಜನ; ಅವರಿಗೆ ಗಂಟಲು, ಕೈ ಕಾಲು, ಇತ್ಯಾದಿಯನ್ನೊದಗಿಸಿದ ಜನರನ್ನುಳಿದು.
ದೀಪಾವಳಿ ಸ್ಪೆಷಲ್	:	ದೀಪಾವಳಿ ಹಬ್ಬದದಿನ ಆಯಾ ಚಿತ್ರಮಂದಿರದಲ್ಲಿ ಮಾಮೂಲಿನಂತೆ ಪ್ರದರ್ಶಿತವಾಗುವ ಚಿತ್ರ.
ಬಾಕ್ಸ್ ಆಫೀಸ್	:	ಚಿತ್ರಗಳ ಗೋರಿ.
ರಜತ ಪರದೆ	:	ಬಿಳಿ ಬಟ್ಟೆ.
ವದನಾರವಿಂದ	:	ಮೂತಿ
ಸರಸ ಸಂಭಾಷಣೆ	:	ಚಿತ್ರಮಂದಿರದಲ್ಲಿ ಮಹಿಳಾ ಪ್ರೇಕ್ಷಕಿಯರು ಮಾಡುವ ಟೀಕೆ.
ಸಿನಿಮ ಹಾಡು	:	ಹಿಂದಿ ಹಾಡುಗಳ ಅನುಕರಣ....
ಹಾಸ್ಯ	:	ಎನ್ನೆಸ್ಕೆ—ಟಿ ಎ ಎಂ.
ಹಿಮ್ಮೇಳ	:	ನಟನಟಿಯರ ಮಾತು ಕೇಳಿಸದಂತೆ ತಮ್ಮನ್ನು ರಕ್ಷಿಸಲು ಒಂದು ಉಪಾಯ.
ಹಿಂದೆಂದೂ ಇಲ್ಲದ	:	ಮುಂದೆಂದೂ ಆಗಕೂಡದೆನಿಸುವ.

— ಶಾಂತ.

ಅಖಿಲಭಾರತ ಸ್ಪರ್ಧೆ

ಈಗಂತೂ ಎಲ್ಲವೂ ಅಖಿಲಭಾರತವೆ! ಭಾರತ ಬಲವಾಗಿ ಎರಡು ಹೋಳಾದ ಮೇಲೂ, ಒಂದು ಹೋಳಿಗೆ ಭಾರತ ಎಂಬ ಹೆಸರನ್ನಿಟ್ಟು ನಾವು ಅಖಿಲಭಾರತ ಸಮ್ಮೇಲನ, ಸಂಘ, ಸಂಸ್ಥೆ, ಸ್ಪರ್ಧೆಗಳನ್ನಿರಿಸಿ, ಆನಂದಿಸುತ್ತೇವೆ. ಸಂಗೀತ ನಾಟಕ ನೃತ್ಯ ಕಲಾಸ್ಪರ್ಧೆಗಳು ಹಾಗಿರಲಿ; ಕೈಗಾರಿಕಾ ಪ್ರದರ್ಶನ, ಶಿಶುಪ್ರದರ್ಶನ, ಪಶು ಪ್ರದರ್ಶನ, ಇತ್ಯಾದಿಗಳನ್ನು ನಡೆಯಿಸಿ, ಟಿಕೇಟಿಟ್ಟು, ಹಣ ಸಂಪಾದಿಸುತ್ತಿದೇವೆ. ಅಖಿಲಭಾರತ ಕ್ರಿಕೆಟ್ ಪಂದ್ಯಗಳಿಗೆ ಅವಕಾಶ ಕೊಟ್ಟಾಗ, ಬ್ಯಾಡ್‌ಮಿಂಟನ್ ನವರೂ ಕೂಡ ತಮ್ಮ ಆಟವನ್ನು ಸ್ಪರ್ಧೆಯ ಮಟ್ಟಕ್ಕೇರಿಸಿದರು.

ಸಾಮಾನ್ಯವಾಗಿ ಪಾರ್ಲಿಮೆಂಟುಗಳಲ್ಲಿ, ಪಕ್ಷ ಪ್ರತಿಪಕ್ಷಗಳ ದಿನ ದಿನದ ಸೆಣೆಸಾಟವಿರುವ ಕಡೆ, ಅದೇ ಸಾಕು, ಸ್ಪರ್ಧೆಗೆ. ಆದರೆ, ನಮ್ಮಲ್ಲಿ ಹಾಗಿಲ್ಲ. ಆದ್ದರಿಂದ, ಪಾರ್ಲಿಮೆಂಟು ಸದಸ್ಯರುಗಳೂ, ಸಿನಿಮ ತಾರೆಯರಂತೆ, ಕ್ರಿಕೆಟ್ ಟೀಮುಗಳನ್ನು ರಚಿಸಿಕೊಂಡು, ಚೆಂಡು ದಾಂಡು ಹಿಡಿದು, ಪಿಚ್ಚಿನಿಸಿದ ಜಾಗದಲ್ಲಿ ನಿಂತು, ಟಿಕೇಟಿಗೆ ಆಟ ಆಡುತ್ತಿದಾರೆ. ಇದು ತೀರ ಅಸಮಂಜಸ. ಶಾಲಾ ಕಾಲೇಜು ಸೇರಿದಾಗಿನಿಂದ, ಓದು ನಿಲ್ಲಿಸಿ, ಪುಸ್ತಕ ಪೆನ್ನುಗಳೆಸೆದು, ಕ್ರಿಕೆಟ್ ಆಟಕ್ಕಾಗಿಯೇ ತನುಮನಗಳನ್ನು ತಂದೆ ಮಾವಂದಿರ ಧನವನ್ನು ತ್ಯಾಗಮಾಡಿ ದವರಿಗೆ ಮಾತ್ರ ಕ್ರಿಕೆಟ್ ಮೀಸಲು.

ಎಂ. ಪಿ. ಗಳೂ ಎಂ. ಎಲ್. ಎ. ಗಳೂ ಎಂ ಎಲ್. ಸಿ. ಗಳೂ ಆಡುವ ಆಟಗಳ ರೀತಿನೀತಿಗಳೇ ಬೇರೆ. ಆ ಆಟಗಳಲ್ಲಿ ಸ್ಪರ್ಧೆ ನಡೆಯಿಸಿ, ಉತ್ತೀರ್ಣ ರಾದವರಿಗೆ ಸ್ಥಾನಗೌರವಗಳನ್ನು ಹಂಚುವ ಕಾರ್ಯ ಈಗ ಏಳೆಂಟುವರ್ಷಗ ಳಿಂದಲೂ ನಡೆಯುತ್ತಲೇ ಇದೆ. ಇಂಥ ಉತ್ತೀರ್ಣರೇ ಮಂತ್ರಿಗಳು, ಉಪಮಂತ್ರಿ ಗಳು. ಆದ್ದರಿಂದ, ಅಖಿಲಭಾರತ ಮಂತ್ರಿ ಕ್ರೀಡಾಸ್ಪರ್ಧೆಯೊಂದನ್ನೇಕೆ ಏರ್ಪಡಿಸ ಬಾರದು. ಆಯಾ ಕಸಬಿಗೆ ತಕ್ಕಂಥ ಆಟಗಳೂ ಇವೆ. ಅವುಗಳಲ್ಲಿ ಸ್ಪರ್ಧೆ ನಡೆಯಿಸಿದರೆ, ತಮ್ಮ ದಕ್ಷತೆ, ಸಾಮರ್ಥ್ಯ ಕೈ ಚಳಕ, ಕಸಬುದಾರಿಕೆ, ಜಾಣತನ ಇತ್ಯಾದಿಯನ್ನು ಅಭಿವೃದ್ಧಿಗೊಳಿಸಿ ಪ್ರಕಟಿಸಲು ಅವರಿಗೂ ಅವಕಾಶ ಸಿಕ್ಕುತ್ತದೆ.

ಹಾಗಾದರೆ, ಅಂಥ ಕ್ರೀಡೆಗಳು ಯಾವುವು? ಮಾದರಿಗಾಗಿ ಇಲ್ಲಿ ಹಲವನ್ನು ಮಾತ್ರ ಕೊಡಲಾಗಿದೆ. ಈ ವರ್ಷದ ಆಗಸ್ಟ್ ೧೫ರ ಉತ್ಸವದಂದು, ಈ ಕೆಳಗಿನ ಲ ಸ್ಪರ್ಧೆಗಳನ್ನಾದರೂ ಏರ್ಪಡಿಸಬಹುದಲ್ಲವೆ?

೧. ಪ್ರೋಗ್ರಾಂ ಪ್ರಕಾರ ಇತ್ಯರ್ಥವಮಾಡಿದ ಒಂದು ಸಮಾರಂಭಕ್ಕೆ ಯಾವ ಮಂತ್ರಿ ಎಷ್ಟು ತಡವಾಗಿ ಬರುತ್ತಾರೆ? ಅತೀ ಹೊತ್ತುಕಾಲ ಯಾರು ಸಭಿಕರನ್ನು ಕಾಯಿಸಿ ಗೋಳು ಹುಯ್ದುಕೊಳ್ಳುತ್ತಾರೆ?

೨ ಕೈಕೆಳಗಿನ ಆಫಿಸರುಗಳು ಬರೆದ ಕಾಗದ ಪತ್ರಗಳನ್ನು ನೋಟ್ಸುಗಳನ್ನು ಯಾವ ಮಂತ್ರಿ ತೀರ ತಿರುಗ ಮರುಗ ಅರ್ಥಮಾಡಿಕೊಳ್ಳುತ್ತಾರೆ? ಅದನ್ನು ಓದಬಲ್ಲವರೆಷ್ಟುಮಂದಿ? ಅರ್ಥಮಾಡಿಕೊಳ್ಳುವರು ಎಷ್ಟು? ಅಪಾರ್ಥಮಾಡಿಕೊಳ್ಳುವುದರಲ್ಲಿ ಯಾರು ಫಸ್ಟು?

೩ ಕಲ್ಲುಹಾಕುವ ಸ್ಪರ್ಧೆಯಲ್ಲಿ ಯಾರು ಫಸ್ಟು? ಅತೀ ಹೆಚ್ಚು ಪ್ಲಾನು ಗಳಿಗೆ, ಯೋಜನೆಗಳಿಗೆ, ಸುಧಾರಣೆಗಳಿಗೆ, ಯಾರು ಕಲ್ಲು ಹಾಕಿದಾರೆ?

೪. ಹಳೇ ಬೀದಿಗಳಿಗೆ ಹೊಸ ಹೆಸರನ್ನು ಇಡುವ ಆಟದಲ್ಲಿ, ಯಾವ ಮಂತ್ರಿ ಫಸ್ಟು?

೫. ಆದಷ್ಟು ಕಡಮೆ ವೆಚ್ಚದಲ್ಲಿ ಆದಷ್ಟು ಹೆಚ್ಚು ಸುಖಜೀವನವನ್ನು ಯಾವ ಮಂತ್ರಿ ಜೀವನ ಸಾಗಿಸುತ್ತಿದಾನೆ?

೬. ಬಂಧುಮಿತ್ರರಿಗೆ ಉಚ್ಚ ನೌಕರಿಗಳನ್ನು ಕೊಡಿಸುವ ಸ್ಪರ್ಧೆಯಲ್ಲಿ ಯಾರು ಅತ್ಯಂತ ಜಯಗಳಿಸಿದಾರೆ?

೭. ಸತ್ಯ, ಅಹಿಂಸೆ, ಮಹಾತ್ಮ ಎಂಬ ಮಾತುಗಳನ್ನು ವರ್ಷವೊಂದಕ್ಕೆ ಅತೀ ಹೆಚ್ಚು ಸಂಖ್ಯೆಯಲ್ಲಿ ಯಾರು ಉಪಯೋಗಿಸಿದಾರೆ?

೮. ಪಕ್ಷದ ಬಿಕ್ಕಟ್ಟನ್ನು ಪರಿಹರಿಸಲು ಡಿಲ್ಲಿ ಪ್ರಯಾಣ, ಆಸ್ಪತ್ರೆ ಪ್ರಯಾಣ, ಈ ಉಪಾಯಗಳನ್ನು ವರ್ಷವೊಂದಕ್ಕೆ ಯಾರು ಅತೀ ಹೆಚ್ಚು ಸಂಖ್ಯೆಯಲ್ಲಿ ಉಪಯೋಗಿಸಿ, ಜಯಗಳಿಸಿದಾರೆ?

—ಕಾಮತ್.

ವೈದ್ಯರಲ್ಲಿ ವಿಷನಿಮಿಷಗಳು : (೨)

ಡಾಕ್ಟ್ರೇ—ನಾನು ನೂರುವರ್ಷ ಬದುಕಬೇಕಾದರೆ ಏನುಮಾಡಬೇಕು ಹೇಳಿ ಡಾಕ್ಟ್ರೇ"

"ಧೂಮಪಾನ ಬಿಟ್ಟುಬಿಡಿ, ಮಧ್ಯಪಾನ ಬಿಟ್ಟುಬಿಡಿ, ನಾಲಗೆ ಚಪಲ ಬಿಟ್ಟುಬಿಡಿ, ಹೊತ್ತಿಗೆ ಮುಂಚೆ ಮಲಗಿ, ಹತ್ತು ಘಂಟೆಯಾದರೂ ನಿದ್ರಿಸಿ, ಆಸೆಗ ಳಿದ್ದರೆ ಯೋಚನೆ-ಆಸೆಗಳನ್ನೆ ಬಿಡಿ"

"ಇದೆಲ್ಲಾ ಮಾಡಿದರೆ ನೂರುವರ್ಷ ಬದುಕಿರಬಹುದೇ ಡಾಕ್ಟ್ರೇ"

"ಇಲ್ಲ—ಹಾಗೇ ಕಾಣುತ್ತೆ!"

— "ಕೇಘ".

ನೀ ನಾ ರೆ
(ವೀಸೀಯವರಂತೆಯೇ)

ಬಿಳಿಯ ಹಿಮದಿಂ ಮೊಗವನರಳಿಸಿ
ಥಳ ಥಳಿಪ ನೀಯಾನ ಸೈನಿನ
ತೆರದಿ ಹೊಳೆಯುವ ಹೊರಳುಗಂಗಳ
ಚಲುವೆ ನೀರಾರೆ
ಕಾಲೇಜ ದಾರಿಯ ಕೆಣಕಿ ನೀರಾರೆ
ಕೃತಕ ಮೋಹದ ಮೊಗದ ಸೊಗಸೊ
ತುಟಿಯು ಅಂಟಿನ ಕೆಂಪು ಅಧರವೊ
ನಡೆವ ದಾರಿಗರನ್ನು ನಿಲಿಸುವ
ಬೆಡಗಿ ನೀರಾರೆ
ವೀಕ್ಲಿ ಮುಖಪುಟ ಚೆಲುವೆ ನೀನಾರೆ
ಕವರ ಕಣ್ಣಾಂ ಸೋಂಕಿ ತಿಲ್ಲವೊ
ಏನು ಭ್ರಮೆಯನು ಎರಚಿ ಚಿಮ್ಮುವೆ
ಸತ್ತ ಕಾಮನ-ನೆತ್ತಿ ನಿಲಿಸಿದ
ಚೆಲುವೆ ನೀನಾರೆ
ಕೈಯ ಹೊತ್ತಿಗೆ ಹೆಣ್ಣೆ ನೀನಾರೆ
ತೆರೆವ ತೋಳಿಗೆ ಗಾಳಿಯಲ್ಲಿ
ಬಯಕೆ ಬೇಟವು ಸ್ವಪ್ನದಲ್ಲೆ
ಬಾತು ನಡೆಗೆಯ ಮೀನುಗಂಗಳ
ಚೆಲುವೆ ನೀನಾರೆ
ಜಾಹಿರಾತ್ ಜಾರ್ಜಟಿಯೆ ನೀನಾರೆ
ದಾರಿಕಣ್ಗಳ ದೋಸೆ ಕಾಫಿಯೆ
ನೋಡಿ ನೋಡದ ತುಡುಗೆ, ಮಂಕರ
ಬಲೆಗೆ ತೂರಿಪ ಹಾರು ಸೆರಗೇ
ಚೆಲುವೆ ನೀನಾರೆ
ಪ್ರಗತಿ ಶೀಲರ ಗಲ್ಲ ಗಿಣಿಯೇನೆ
ನಿನ್ನ ಬಯಸುವ ಮೋಹ ತವಕಕೆ
ನುಡಿಸು ವೊಲಿಸುವ ಎದೆಯ ಕಿಚ್ಚಿಗೆ
ಮಣ್ಣ ತೂರುವ ಬಗೆಯ ವೇಗಕೆ
ತಡೆಗಳಿಲ್ಲೇಕೆ
ಸಂಜೆ ಬಿಂಕಿ! ಸಿನಿಮ ದಾರಿಯ ನಡೆವೆಯಿಂತೇಕೆ
ಹೇಳಿ ಕೇಳುವರಿಲ್ಲ ವೆಂದೇನೆ?

—ಅ. ರಾ. ಸೇ.

ಸಮುಸ್ಕ್ಋತಿ!?

ಇದೇನು ಬಂತಿವರಿಗೆ?– ಅಂತ ಆಶ್ಚರ್ಯಪಡಬೇಡಿ–ಮುಂದೆ ಓದಿ.

"ನೀವು ಡಾಕ್ಟರ್ ಮಾಧು ಸ್ನೇಹಿತರೆಂದಮೇಲೆ ನನಗೂ ಸ್ನೇಹಿತರೇ" ಅಂದರು–ಡಾಕ್ಟರ್ ಸೀತಾರಾಮ್–ಮೇಟಿನಹಳ್ಳಿ ಡಾಕ್ಟರು.

ಅಂದಮೇಲೆ ಅವರ ಆತಿಥ್ಯ ಸ್ವೀಕರಿಸದೆ ಬೇರೆ ಮಾರ್ಗವಿಲ್ಲ ಯಥೋಚಿತ ಸತ್ಕಾರ ಸ್ವೀಕರಿಸಿ ರಾತ್ರಿಯೂಟವಾದಮೇಲೆ ನಾವೂ, ಡಾಕ್ಟರೂ, ಡಾಕ್ಟರ್ ಮನೆಯ ಪಕ್ಕದ ಮನೆಯುವರಾದ ರಂಗರಾಯರೂ, ಹಳ್ಳಿಯ ವಾಡಿಕೆಯಾಗಿ ಜಗುಲಿ–ಹರಟೆಗೆ ಮೆಲುಕುತ್ತ ಕುಳಿತೆವು. ಯಾವುದೋ ಪುರಾಣದಲ್ಲಿ ಬರುತ್ತೆ–ಸಂಸ್ಕೃತಿ ಪ್ರಸಾರದಲ್ಲಿ ಕೇಳಿದ್ದು–ಪ್ರಾಯಶಃ ಸೂತ ಪುರಾಣಿಕರು ಯಾರಿಗೋ ಹೇಳಿದ್ದಿರಬೇಕು–"ಆಕಾಶಾತ್ ಪತಿತಂ ತೋಯಂ ಯಥಾತೆರಿಗೆ ತೆರುವವರಿಗೆ ಹೊರೆ"–ಅಥವಾ–ಅದೇಪ್ರಕಾರ ಬರುತ್ತೆ–ಮಾತಿಗೆ ಮಾತು ಬೆಳೆದು ಈ ಸಂಸ್ಕೃತಿ ಪ್ರಸಾರಕ್ಕೇ ಬಂತು. ಆ ವಿಷಯವಾಗಿ ಡಾಕ್ಟರ್ ಸೀತಾರಾಮ್ ಹೇಳಿದರು –

"ನಂಗೇನೋ ಸಂಸ್ಕೃತಿ ಅಂದರೆ ಏನೂಂತ ಅರ್ಥವಾಗಿಲ್ಲ. ನಾವೇನು ಈಗ ಗತವೈಭವಗಳನ್ನು ನೆನೆಸಿಕೊಂಡು ಅಳಬೇಕೋ ಅಥವಾ ಆ ಪುರಾಣ ಪುರುಷರ ಹಾಗೆ ನಮ್ಮ ಜೀವನ ಬದಲಾಯಿಸಬೇಕೋ–ನನಗೆ ಅರ್ಥವಾಗಿಲ್ಲ. ನನಗಂತೂ ಧರ್ಮರಾಯ, ಭೀಮ, ಕರ್ಣ, ದ್ರೌಪದಿ, ಸೀತೆ–ಇವರೆಲ್ಲಾ ನಮಗೆ ಎಚ್ಚರಿಕೆ ಕೊಡುವ ವ್ಯಕ್ತಿಗಳೇ ಹೊರತು ಈ ನಮ್ಮ ಆಧುನಿಕ ಜೀವನವನ್ನು ಹತೋಟಿಗೆ ತರುವವರಲ್ಲ! ನಾವು ಅವರನ್ನು ದೂರದಿಂದಲೇ ಪೂಜಿಸುತ್ತಿದ್ದರೆ ನಮಗೂ ಕ್ಷೇಮ–ಅವರಿಗೂ ಕ್ಷೇಮ! ಈಗ ನೋಡಿ–ಎಲ್ಲರೂ ಹೇಳ್ತಾರೆ–ನಮ್ಮವರು ನಾಗರಿಕತೆಯಲ್ಲಿ ಮುಂದುವರಿದಿದ್ದಾಗಲು ಕೂಡ ಇತರ ದೇಶದವರು ಇನ್ನು ಕಾಡು ಜನರಾಗಿದ್ದರು ಅಂತ–ಆದರೆ ಆ ಸೇಡು ತೀರಿಸಿಕೊಳ್ಳೋಕೋ ಏನೋ–ಇತರ ದೇಶದವರು ಈಗ ನಾಗರಿಕರಾಗಿದ್ದಾರೆ–ನಾವು ಕಾಡುಜನರಾಗುತಿದ್ದೇವೆ. ಪರದೇಶಕ್ಕೆ ಹೋಗಿ ಬಂದವರೊಬ್ಬರು ನನ್ನ ಸ್ನೇಹಿತ ಡಾಕ್ಟರು–ಹೇಳಿದರು–ಅಲ್ಲಿ ಯಾರಾದರೊಬ್ಬ ವ್ಯಕ್ತಿ ಹಾದಿಯಲ್ಲಿ ಜನರ ಮಧ್ಯೆ ಕ್ಯಾಕರಿಸಿ ಉಗಿದನೆಂದರೆ ತಕ್ಷಣ ಅವನನ್ನು ಎಲ್ಲರೂ– "ಓಹೋ–ಈತ ಇಂಡಿಯಾದಿಂದ ಬಂದವನಿರಬೇಕು! ಅನ್ನುತ್ತಾರಂತೆ, ಅಂದಮೇಲೆ ಹೊರಗಿನವರಿಗೆ ನಾವು ಎಷ್ಟು ಸುಸಂಸ್ಕೃತರು ಅಂತ ತಿಳಿಯುತ್ತೆ—ಹೇ? ನಾವೆಷ್ಟು...."

ಮಧ್ಯೆ ರಾಜ ಬಾಯಿಹಾಕಿ ಶೃತಿತಪ್ಪಿ "ಹೌದು ಡಾಕ್ಟರೇ-ನನ್ನ ಭಾವ-" ಅಂತ ಶುರುಮಾಡಿದ.

ನನ್ನ ಕಣ್ಣು ನೋಡಿದ. ಸುಮ್ಮನಾದ.

ಡಾಕ್ಟರು ಮುಂದುವರಿದು-

"ನಾವೆಷ್ಟು ಭಾಷಣ ಕೇಳಿದರೇನು, ಎಷ್ಟು ಪುರಾಣ ಕೇಳಿದರೇನು ನಮ್ಮಲ್ಲಿ ಬೇರೂರಿರುವ ಕೆಲವು ಮೂಢತನಗಳು ಹೋಗುವವರಿವಿಗೂ ನಮ್ಮನ್ನು ಸುಸಂಸ್ಕೃತರು ಅಂತ ಯಾರೂ ಹೇಳುವುದಿಲ್ಲ. ಕಾಲಬದಲಾಯಿಸಿದ ಹಾಗೆಲ್ಲಾ ಒಂದು ಜನಾಂಗದ ಸಂಸ್ಕೃತಿಯ ಅರ್ಥವೂ ಬದಲಾಯಿಸುತ್ತೆ. ಈಗ ನಮಗೆ ಬೇಕಾಗಿರು ವುದು ಆಧ್ಯಾತ್ಮಿಕ ಜ್ಞಾನಕ್ಕಿಂತ ಆಧುನಿಕ ಜ್ಞಾನಬೇಕು. ಹಾಗೂ ನಮ್ಮ ಜನಾಂಗ ಒಟ್ಟು ಪ್ರಪಂಚದ ಜನಾಂಗದ ಕೇವಲ ಒಂದುಭಾಗ. ಹಾಗಾಗಿ ನಮ್ಮ ಸಂಸ್ಕೃತಿ ಯನ್ನು ಮಿಕ್ಕವರ ಸಂಸ್ಕೃತಿಯೊಂದಿಗೆ ಹೋಲಿಸುವುದು ನಮ್ಮ ಧರ್ಮ. ನಾವೀಗ ನಮ್ಮ ಹಿಂದಿನವರು ನಮಗೆ ನೀಡಿರುವ ಸಂಸ್ಕೃತಿಯನ್ನೇ ಹಾಡುತ್ತಿದ್ದೇವೆಯೇ ಹೊರತು, ಮುಂದೆ ಬರುವವರಿಗೆ "ನಮ್ಮ" ಸಂಸ್ಕೃತಿಯನ್ನು ಏನು ಬಿಡುತ್ತಿದ್ದೇವೆ? ಇಂದು ವಾಲ್ಮೀಕಿ ಋಷಿಗಳೇ ಬರಲಿ, ವೇದವ್ಯಾಸರೇ ಇಳಿದು ಬರಲಿ-ಒಂದುದಿನ ನಮ್ಮ ಜೊತೆಯಲ್ಲಿದ್ದು ಹೋದರೆ, ಅವರ ಜೊತೆಯಲ್ಲಿ ಅವರ ರಾಮಾಯಣ, ಮಹಾಭಾರತಗಳನ್ನು ಕಟ್ಟಿಕೊಂಡು ಹೋಗಿ ಯಾವುದಾದರೂ ಗುಟ್ಟಾದ ಜಾಗದಲ್ಲಿ ಬಚ್ಚಿಟ್ಟು ಫಲಾಯನಮಾಡುತ್ತಾರೆ-ಒಂದುವೇಳೆ ಅವರೂ ನಮ್ಮಹಾಗೆ ಕೆಡದೇ ಹೋದರೆ!...."

"ಹಾಗಾದ್ರೆ ಡಾಕ್ಟರೇ-ನಿಮಗೆ ನಮ್ಮ ಪುರಾಣಗಳಲ್ಲಿ, ನಮ್ಮ ಸಂಸ್ಕೃತಿಯಲ್ಲಿ ಮಮತೆಯೇ ಇಲ್ಲ ಅಂತ ಕಾಣುತ್ತೆ" ಅಂದರು ರಂಗರಾಯರು.

"ಹಾಗಲ್ಲ ರಂಗರಾಯರೇ-ಒಂದು ಉದಾಹರಣೆ ತೆಗೆದುಕೊಳ್ಳೋಣ. ನೀವು ಇವತ್ತು ಸಾಯಂಕಾಲ ನಿಮ್ಮ ಆಪರೇಶನ್ನಿನ ವಿಷಯ ಹೇಳುತ್ತಾ ಈ ರೋಗಿಗಳ ಶೃಶ್ರೂಷೆ-ನರ್ಸಿಂಗ್-ವಿಷಯ ಹೇಳಿದಿರಿ. ನಿಮ್ಮ ಈ ಎಂಟು ಹತ್ತು ದಿನಗಳ ಅನುಭವದ ಹಿಂದೆ, ನೂರಾರು ವರ್ಷಗಳ ಕಷ್ಟ ನಿಷ್ಠೂರನ್ನೊಳಗೊಂಡ ಸಾಧನೆ ಇದೆ ಅನ್ನೋದು ನಿಮಗೆ ಗೊತ್ತೇ? ನಿಜವಾಗಿ ನಮ್ಮ ದೇಶದಲ್ಲಿ ಈ ನರ್ಸಿಂಗ್ ಕೆಲಸವು ಸ್ವಲ್ಪವಾದರೂ ಸಧರಿಸಿರುವುದು ಆ ಪಾಶ್ಚಿಮಾತ್ಯ ಪಾದ್ರಿಗಳಿಂದ-ಅವರು ಸ್ಥಾಪಿ ಸಿರುವ ಆಸ್ಪತ್ರೆಗಳಿಂದ. ಅವರು ನಮ್ಮ ಜಾತಿಕೆಡಿಸಿರಬಹುದು-ಅದು ನಮ್ಮ ತಪ್ಪು!-ಆದರೆ ನಮ್ಮ ಜನರಿಗೆ ಒಂದು ಶಾಶ್ವತವಾದ ಬೆಳಕನ್ನು ನೀಡಿದ್ದಾರೆ. ಎಷ್ಟೋ ಜನರು ಇದೇ ರೋಗಿಗಳ ಶೃಶ್ರೂಷೆಗಾಗಿ ತಮ್ಮ ಜೀವಮಾನವನ್ನು ಧಾರೆ ಎರೆದಿದ್ದಾರೆ-ಅವರದೇ ಒಂದು ಸಂಸ್ಕೃತಿಯನ್ನು ಸ್ಥಾಪಿಸಿದ್ದಾರೆ-ಇನ್ನೂ ಸ್ಥಾಪಿಸು ತ್ತಿದ್ದಾರೆ. ನಾವು ನಮ್ಮ ಸಾವಿರಾರು ವರ್ಷಗಳ ಹಿಂದಿನ ಸಂಸ್ಕೃತಿಯನ್ನು

ಪ್ರಪಂಚಕ್ಕೆ ತೋರಿಸುತ್ತಾ ಜಂಭ ಕೊಚ್ಚುತ್ತಿದ್ದೇವೆ-ನಿಜವಾಗಿ ನಾಚಿಕೆ ಪಡಬೇಕು! ನೀವು ಡಾಕ್ಟರಾಗಿದ್ದರೆ ನಿಮಗೆ ತಿಳಿಯುತ್ತಿತ್ತು-ಎಷ್ಟುಜನ, ಒಂದು ಸಾಧಾರಣ ರೋಗದ ಮೂಲ ಕಂಡುಹಿಡಿಯಲು ಹೋಗಿ ತಮ್ಮ ಪ್ರಾಣಕಳೆದುಕೊಂಡಿದ್ದಾರೆ! ತಾವೇ ಭಯಂಕರ ರೋಗಗಳನ್ನು ಅಂಟಿಸಿಕೊಂಡು ನರಳಿ ಅದರ ಬಗ್ಗೆ ನಿವಾರಣೆ ಗಳನ್ನು ಕಂಡುಹಿಡಿದಿದ್ದಾರೆ! ಇವೆಲ್ಲವೂ ಒಂದು ದೇಶದ ಸಂಸ್ಕೃತಿಯಲ್ಲವೇ? ಇವುಗಳ ಪರಿಣಾಮವೇನು ಗೊತ್ತೇ-ಪಾಶ್ಚಿಮಾತ್ಯ ದೇಶಗಳಲ್ಲಿ ಜನರ ಆಯಸ್ಸು ಸರಾಸರಿ ಐವತ್ತಕ್ಕೆ ಮೀರಿದೆ-ನಮ್ಮಲ್ಲಿ ಕೇವಲ ಇಪ್ಪತ್ತೈದು! ಪ್ರಪಂಚದಲೆಲ್ಲಾ ಶಿಶುಮರಣಗಳು ನಮ್ಮ ದೇಶದಲ್ಲಿ ಜಾಸ್ತಿ! ಏಕೆ? ನಮ್ಮ ಜನರಿಗೆ ಸಂಸ್ಕೃತಿಗಿಂತಲೂ ವಿಜ್ಞಾನಬೇಕು. ನಮ್ಮ ಜನರನ್ನು ಭೂತ, ಪಿಶಾಚ, ದೆವ್ವಗಳ ಬಂಧನದಿಂದ ತಪ್ಪಿಸಬೇಕು. ನಾನು ಡಾಕ್ಟರು-ನನಗೆ ಗೊತ್ತು-ಒಂದು ಮಗುವಿಗೆ ದೇವಿಹಾಕಲು ಹೋದರೆ ನಮ್ಮ ಬುದ್ಧಿಯೆಲ್ಲಾ ಖರ್ಚುಮಾಡಬೇಕು. ಬೇರೆದೇಶಗಳಲ್ಲಿ ಈ ಸಿಡುಬು ರೋಗವನ್ನೇ ನಿರ್ಮೂಲವಮಾಡಿಹ್ದಾರೆ, ಹೋಗಲಿ-ಈ ಚಿಕ್ಕಮಕ್ಕಳ ವಿದ್ಯಾಭ್ಯಾಸ ತೆಗೆದುಕೊಳ್ಳಿ-ಒಂದು ಕಾನ್ವೆಂಟಿಗೂ ನಮ್ಮ ಮಕ್ಕಳ ಶಾಲೆಗೂ ಹೋಲಿಸಿ! ಕಾನ್ವೆಂಟಿನಲ್ಲಿ ಸಿಗುವ ವಿದ್ಯಾಭ್ಯಾಸ, ವಿದ್ಯೆಕ್ಕಿಂತ ಮುಖ್ಯವಾದ ನಡವಳಿಕೆ, ಶಿಸ್ತು ನಮ್ಮ ಶಾಲೆಗಳಲ್ಲಿ ಎಲ್ಲಿವೆ?"

"ಆಗಲಿ ಡಾಕ್ಟರೇ-ಒಂದೇ ದಿನದಲ್ಲಿ ಎಲ್ಲವೂ ಆಗುತ್ಯೇ?" ಅಂದರು ರಂಗ ರಾಯರು.

"ಇಲ್ಲ-ಒಂದು ದಿನದಲ್ಲಿಲ್ಲ-ನಮ್ಮ ದೇಶದಲ್ಲಿ ಒಂದು ಸಾವಿರವರ್ಷದಲ್ಲೂ ಆಗುಲ್ಲ! ನಮ್ಮನ್ನಾಳುವವರು, ಹಣವಿದೆ-ಖರ್ಚುಮಾಡಲೇಬೇಕು-ಅಂತ ಅವಸರ ಪಡುವುದು ಬಿಟ್ಟು ಯಾವುದು ಮುಖ್ಯ, ಯಾವುದು ಉಪಯೋಗವೆಂದು ಯೋಚಿಸಿ, ಶಿರೋನಾಮಗಳ ಮನೋಭಾವ ಬಿಟ್ಟು, ಹತ್ತುಜನರ ನಲಹೆಗಳಕಡೆ ಗಮನ ಕೊಡುವವರಿಗೂ ಆಗುಲ್ಲ! ಕುದುರೆಕೈಲಿ ಗಾಡಿ ಎಳೆಸುವುವುದು ಬಿಟ್ಟು, ಗಾಡೀನ, ಮುಂದೆ ಕಟ್ಟಿದರೆ ಆಗುತ್ಯೆ?—ಅಯ್ಯೋ ಬಿಡಿ-ನಾವು ಈ ಮೇವಿನ ಹಳ್ಳೀಲಿ ಕೂತು ಕಿರುಚಿದರೆ ಏನು ಪ್ರಯೋಜನ?" ಅಂದರು.

ಗಡಿಯಾರ ನೋಡಿ-"ಓಹೋ-ಹೋತ್ತಾಯ್ತು-ಏಳೋಣ" ಅನ್ನುತ್ತ ಎದ್ದರು.

ಮಾರನೇದಿನ "ನಾಷ್ಟಾ"-(ಅಂದರೆ ಡಾಕ್ಟರ್ ಸೀತಾರಾಮ್‌ರವರಿಗೇ ನಷ್ಟ ವಾದದ್ದು)-ನಾಷ್ಟಾ ಮುಗಿಸಿ ಡಾಕ್ಟರಿಗೂ ರಂಗರಾಯರಿಗೂ ವಂದಿಸಿ ಮೇವಿನಹಳ್ಳಿ ಬಿಟ್ಟೆವು. ನಾನೂ ರಾಜ ಚಂದಿ ಒಂದು ಕೌಲು ಮಾಡಿಕೊಂಡೆವು-'ಇನ್ನು ಮೇಲೆ ಸಂಸ್ಕೃತಿ ಮಾತು ಎತ್ತಕೂಡದು' ಅಂತ. ಏಕೆಂದರೆ ಮೊದಲೇ ನಮ್ಮಲ್ಲಿದ್ದ ಕಿಡೀನ ಡಾಕ್ಟರು ಉರಿಮಾಡಿದ್ದರು! ಈಗ ಸಂಸ್ಕೃತಿ ಅನ್ನಬೇಕಾದರೆ ನನ್ನ ಬಾಯಿ ತೊದ

ಉತ್ತೆ! ಆದರೂ ನಮ್ಮ ತಲಕಾಡು ಯಾತ್ರೆ ಮುಗಿದಮೇಲೆ ಅದರಮೇಲೆ-ಅಂದರೆ ಸಂಸ್ಕೃತಿಮೇಲೆ, ತಲಕಾಡು ಮೇಲಲ್ಲ—ಒಂದು ಪುಸ್ತಕ ಬರೆಯಬೇಕೆಂದು ಯೋಚನೆ ಮಾಡುತ್ತಿದ್ದೆ—

ಮೇವಿನಹಳ್ಳಿ ನಮ್ಮ ಹಿಂದೆ ಸುಮಾರು ಮೂರುಮೈಲಿ ದೂರವಿರಬಹುದು. ಚಂದಿಯ ವಾಹನದ ಮುಂದಿನ ಚಕ್ರದ ಟೈಲು "ಢ್ಢಷೂರ್!" ಎಂದು ಚೀರಿತು.

ಎಲ್ಲರೂ ಇಳಿದೆವು. ಚಂದಿ, ರಾಜ ಅಸಂಸ್ಕೃತಿಯಲ್ಲಿ ವಾಹನವನ್ನು ಬೈದರು. ಸುಸ್ವಾದಮೇಲೆ ಎಲ್ಲರೂ ಸೇರಿ ಚಕ್ರವನ್ನು ರಿಪೇರಿ ಮಾಡಿದೆವು. ನಾನು ಟೈರನ್ನು ಭದ್ರವಾಗಿ ರಿಮ್ಮಿಗೆ ಸೇರಿಸಿ, ಗಾಳಿ ಹೊಡೆಯುವುದಕ್ಕೆ ಅವರಿಬ್ಬರಿಗೆ ಬಿಟ್ಟೆ. ರಾಜ ಕಷ್ಟಪಟ್ಟು ಐದುಬಾರಿ ಪಂಪು ಅವುಕಿದ.

ಟೈರು "ಢ್ಢಮೂರ್!" ಎಂದು ಪುನಃ ಚೀರಿತು.

ಇಬ್ಬರೂ ನನ್ನಕಡೆ ನೋಡಿದರು.

"ನೀವು ಹುಷಾರಾಗಿ ಪಂಪು ಹೊಡೀಬೇಕಾಗಿತ್ತು" ಅಂದೆ.

ಮೂವರು ಸೇರಿ ಪುನಹ ಚಕ್ರ ಬಿಚ್ಚಿದೆವು.—ಪೇಸ್ಟಿನ ಟ್ಯೂಬು, ಚಿಕ್ಕ ಕತ್ತರಿ, ಒಂದು ಸ್ಕ್ರೂಡ್ರೈವರ್ ಒಂದು ಬೆಂಕಿಕಡ್ಡಿ, ಅರ್ಧಬ್ಲೇಡು-ಚಕ್ರದೊಳಗಿಂದ ಹೊರಬಿದ್ದವು.

ಇಬ್ಬರೂ ನನ್ನಕಡೆ ನೋಡಿದರು.

"ನೀವು ಹುಷಾರಾಗಿ........" ಅಂದೆ.

"ಮುಚ್ಚಯ್ಯ ಬಾಯಿ-ನೀನೇ ಕೊನೇಲಿ ಟೈರು ಸೇರಿಸಿದ್ದು" ಅಂತ ನನ್ನನ್ನೇ ಬೈದರು.

ನಳಮಹಾರಾಜನು ತಕ್ಷಕನನ್ನು ಬೆಂಕಿಯಿಂದ ಬದುಕಿಸಿದ್ದಕ್ಕೆ ಏನಾಯಿತು?—ನೀವು ಈ ನಡುವೆ ಆ ಕಥೆ ಕೇಳಿರಬೇಕು, ನಾನು ಬೇಸತ್ತು ಕಷ್ಟಪಟ್ಟಿದ್ದಕ್ಕೆ ಈ ಬೈಗಳ ಕೇಳಿದ್ದಾಯ್ತು. ಯಾರಿಗೆ ಸಹಾಯಮಾಡಿದರೂ ಸ್ನೇಹಿತರಿಗೆ ಸಹಾಯಮಾಡಬಾರದು.

ನಾನು ಸುಮ್ಮನಿದ್ದೆ.

ಪುನಹ ಚಕ್ರವನ್ನು ರಿಪೇರಿಮಾಡಲು ಸಾಕಷ್ಟು ಸಾಮಾನು, ಸಹನೆ ನಮ್ಮಲ್ಯಾರಿಗೂ ಇರಲಿಲ್ಲ, ವಾಹನಗಳನ್ನು ತಳ್ಳಿಕೊಂಡು ಮುಂದೆ ಹೊರಟೆವು.

— "ಕೇಫ".

—o—

ಬಡಿಸು ತಾಯಿ

(ಶ್ರೀ ವಿ. ಸೀ. ಅವರ 'ಕಣ್ತುಂಬ ನೋಡೆಮ್ಮ ಹರಸು ತಾಯಿ' ಎಂಬಂತೆ)

ಕೈತುಂಬ ನೋಡೆಮ್ಮ ಬಡಿಸು ತಾಯಿ
—ಹೇ ಅನ್ನಪೂರ್ಣೇಶ್ವರೀ, ಬಡಿಸು ತಾಯಿ.

ಹತ್ತು ಮುವ್ವತ್ತಾಯ್ತು-ಮಿಲ್ಲುಗಳ ತಾರಸರ
ಒಗ್ಗೊರಲ ಮೇಳದಲಿ ಮೊಳಗುತಿದೆ ಕೇಳಿಂ!
ಮೊಳಗುತಿದೆ ಸ್ವಾತಂತ್ರ್ಯ ಕೊನೆಗೊಂಡಿತೆನ್ನುತ್ತೆ
ಸಕಲ ಶಾಲೆಗೆ ವೇಳೆಯಾಯಿತೆನುತೆ!

ಇಷ್ಟವಿಲ್ಲದ ಮನದಿ ಅಡಿಗೆಯೊಲೆ ಉರಿಯುತಿರೆ
ಹೊಗೆಯೂದಿ ನೀ ಅಟ್ಟ ಪರಿಯ ನೋಡಾ!
ಹತ್ತು ದಿಕ್ಕಿಗಾಳಿ ಹೊತ್ತು ಪರಿಮಳವೆರೆದು
ಮೂಗುಗಳ ಅರಳಿಸುತ ಕೆಣಕುತಿವೆ ನೋಡಾ!

ಅನ್ನ ಪಲ್ಯಗಳೆನದೆ ಹುಳಿಯೆನದೆ ಕೂಟೆನದೆ
ನಿನ್ನ ಅಡುಗೆಯು ನಿಂತ ನಿಲುವ ನೋಡಾ!
ಬಿಸಿಬಿಸಿಯು ಸವಿರಸದ ಹೆಮ್ಮೇಳ ಹರಡಿರಲು
ಭೂಮಿಯಾಕಾಶಗಳ ಪುಳಕ ನೋಡಾ!

ತಪ್ಪಲೆಯ ಆಳಕ್ಕೆ ಅಡಿಯೂರಿ ಮೇಲನ್ನ
ಧವಳ ಗಿರಿಯಾಗಿರುವ ಪರಿಯು ನೋಡಾ!
ನಿನ್ನ ಸಾರಿನ ಕಲಶ-ಅದರ ಪರಿಮಳ ಕೀರ್ತಿ
ಮೇರುಗಿರಿಯಲಿ ನಟ್ಟ ವಿಭವ ನೋಡಾ!

ಸೋಮೇಶ ಸುಬ್ಬಣ್ಣಿ ಗಂಗೆ ತುಂಗೆಯರೆಲ್ಲ
ಸ್ಕೂಲು ಹೋಗುವರಿವರ ನೆರವಿ ನೋಡಾ!
ಬಡಿಸಿದೆಲೆಗಳ ರಾಜ್ಯ ಸಾಮ್ರಾಜ್ಯವಾಗುತಿರೆ
ಮುಖವೆಲ್ಲ ತೃಪ್ತಿಯನು ತುಳುಕುತಿದೆ ನೋಡಾ!

ಓ! ಅನ್ನಪೂರ್ಣೇಶ್ವರೀ!
ಹೋ ಎಂಬ ಜಯತೇಗು ಕೇಳಾ!

—ಹಾರುವ.

ವಿದೇಶಿ ಡಿಗ್ರಿದಾರ

ಭಾರತದಿಂದ ಪ್ರತಿ ಸಂವತ್ಸರವೂ ಸುಮಾರು ಆರು ಸಹಸ್ರ ಯುವಕ ಯುವತಿಯರು ವಿದ್ಯಾರ್ಜನೆಗಾಗಿ ಹೊರದೇಶಗಳಿಗೆ ಹೋಗುತ್ತಿರುವರೆಂದೂ, ಅವರಿಗಾಗಿ, ತಿಂಗಳೊಂದಕ್ಕೈದುನೂರು ರೂಪಾಯಿಗಳಂತೆ, ಮೂರು ಕೋಟಿ ಅರವತ್ತುಲಕ್ಷ ರೂಪಾಯಿ ಖರ್ಚಾಗುತ್ತಿದೆಯೆಂದೂ, ಇದು ತೀರ ಅನ್ಯಾಯವೆಂದೂ, ಅವರು ಪರದೇಶಗಳಲ್ಲಿ ಪಡೆಯುವುದನ್ನು ನಾವು ಭಾರತದಲ್ಲೇ ಒದಗಿಸಲು ಪ್ರಯತ್ನಿಸಬೇಕೆಂದೂ ಡಾ|| ಯದುನಾಥ ಸರ್ಕಾರ್ ಅವರು ಕಲ್ಕತ್ತಾದಲ್ಲಿ ಭಾಷಣಮಾಡಿದಾರೆ.

ಆದರೆ, ವಿದೇಶಿ ಡಿಗ್ರಿಗಳಿಗಾಗಿ ಸಮುದ್ರಯಾನಮಾಡಿ, ಲಕ್ಷಾಂತರ ರೂಪಾಯಿ ವೆಚ್ಚಮಾಡಿ ಹಿಂತಿರುಗಿರುವ ಯುವಕ ಯುವತಿಯರಲ್ಲನೇಕರು ಈ ಅಭಿಪ್ರಾಯವನ್ನು ನಿರಾಕರಿಸಿ, ಹಾಗೆ ಮಾಡಿದರೆ, ಭಾರತದ ವಿದ್ಯಾರ್ಥಿಗಳಿಗೆ ದೊಡ್ಡ ಧಕ್ಕೆ ಎಂದು ತಿಳಿಸಿದಾರೆ.

ಕಾರಣ ಇಷ್ಟೆ! ಹೊರದೇಶಗಳ ನಾಗರಿಕತೆ ಭಾರತದ ನಾಗರಿಕತೆಗೆ ತೀರ ಭಿನ್ನವಾಗಿದೆ. ಅದರ ಅರಿವು ಅನುಭವ ಪರಿಚಯು ಇವು, ಪ್ರತಿಯೊಬ್ಬನಿಗೂ, ತನ್ನ ದೇಶದ ಮುನ್ನಡೆಯನ್ನು ಪರೀಕ್ಷಿಸಲು ಒಂದು ಓರಗಲ್ಲನ್ನು, ಅಮೂಲ್ಯವಾದ ಅಳತೆ ಕೋಲನ್ನೊದಗಿಸುತ್ತದೆ. ಭಾರತ ಎಷ್ಟರಮಟ್ಟಿಗೆ ಅಮೇರಿಕ ಆಯಿತು, ಬ್ರಿಟನ್ನನ್ನು ಎಷ್ಟು ಸಮೀಪಿಸುತ್ತಿದೆ, ಡಿಲ್ಲಿ ಬೊಂಬಾಯಿ ಬೆಂಗಳೂರುಗಳು ಪ್ಯಾರಿಸ್ ನಗರವನ್ನು ಎಷ್ಟು ಸಮೀಪಿಸಿದೆ, ಎಂದು ತಿಳಿಯದೆ, ನಾವು ಹೇಗೆತಾನೆ ಹಿಗ್ಗೇವು?

ಅಲ್ಲದೆ, ಭಾರತ ಇಂದು ಪಾನನಿರೋಧದ ಗೊಂಡಾರಣ್ಯದಲ್ಲಿ ತೊಳಲುತ್ತಿದೆ. ನಮ್ಮ ಹಿರಿಯರು ಎಂಥೆಂಥ ಅಮೃತಪಾನೀಯಗಳನ್ನು ಸವಿದು, ಸುರಲೋಕದ ಸುಖವನ್ನು ಇಳೆಗೆ ಇಳಿಸಿದ್ದರು, ಎಂದು ತಿಳಿಯಬೇಕಾದರೆ, ನಾವು ಪಾಶ್ಚಾತ್ಯ ದೇಶಗಳಿಗೆ ಹೋಗಲೇಬೇಕು ಇಲ್ಲಿ, ಈಗ ವಿದ್ಯಾರ್ಥಿಜೀವನವೇ ದುಸ್ಸಾಧ್ಯವಾಗಿದೆ. ಕಾಲೇಜು ಹುಡುಗರೂ ಕೂಡ, ಸರ್ಕಾರಿ ಬಸ್ಸುಗಳಲ್ಲಿ, ಸಿನಿಮ ಮಂದಿರಗಳಲ್ಲಿ, ಸಿಗರೇಟು ಸೇದಬಾರದಂತೆ. ಹೀಗೆ, ವಿದ್ಯಾರ್ಜನೆಗೆ ನೂರೆಂಟು ಅಡ್ಡಿ ಆತಂಕಗಳನ್ನು ಭಾರತದಲ್ಲಿ ತಂದೊಡ್ಡಿ, ಹುಡುಗರನ್ನು ಇಲ್ಲೇ ಬಾಧಿಸಲು ಪ್ರಯತ್ನಿಸಿದರೆ, ಹೇಗೆ? ಇನ್ನು ನಾಳೆಯಿಂದ, ಸಿಗರೇಟಿನ ಸಹಾಯವಿಲ್ಲದೆಯೇ, ವಿದ್ಯಾರ್ಥಿಗಳು ಗುದ್ದಲಿ ಪಿಕಾಸಿಗಳನ್ನು ಕೈಗೆ ತೆಗೆದುಕೊಂಡು, ಕಂಡವರ ಚರಂಡಿ ಬಾಚಬೇಕಂತೆ. ಡಿಗ್ರಿ ತೆಗೆದುಕೊಳ್ಳ

ಬೇಕಾದರೆ ಪಾಶ್ಚಾತ್ಯದೇಶಗಳಲ್ಲಿ ರಾತ್ರಿ ಪೂರ ದೀಪ ಉರಿಸಿದರೆ ಸಾಕು. ಇಲ್ಲಿ, ಹಗಲು ಪೂರ್ತ, ಪಾಳುಗೋಡೆ ಉರುಳಿಸಬೇಕು, ಇಂಗುಬಚ್ಚಲು ತೋಡಬೇಕು.

ಪರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ದೊರೆಯುವ ಸೌಲಭ್ಯಗಳನ್ನೆಲ್ಲ ಭಾರತದಲ್ಲಿ ಅವರಿಗೆ ಒದಗಿಸಲು ಸಾಧ್ಯವೆ? ಪರದೇಶಗಳಲ್ಲಿ ಈಗ ನಮ್ಮ ಹುಡುಗರಿಗೆ ಕಾಲ ಕಾಲಕ್ಕೆ ಮನಿಯಾರ್ಡರ್ ಸಿಗುತ್ತಿದೆ; ಥರಥರದ ಫ್ರೆಂಚ್ ಅಡಿಗೆಗಳು ದೊರೆಯುತ್ತಿದೆ; ತಿನ್ನುವುದಕ್ಕೂ ಕುಡಿಯುವುದಕ್ಕೂ ಏನೂ ತಾಪತ್ರಯವಿಲ್ಲ; ಅಲ್ಲಿ, ಅಮೇರಿಕನ್ ಕುಟುಂಬಗಳಲ್ಲೋ ಬ್ರಿಟಿಷ್ ಕುಟುಂಬಗಳಲ್ಲೋ ವಾಸವಾಗಿದ್ದು, ಅವರ ಮನೆಯವನಾಗಿ, ಅಳಿಯಂದಿರ ಉಪಚಾರವನ್ನು ಪಡೆಯಲು ಅವಕಾಶವಿದೆ ೬೦೦೦ ಪರದೇಶೀ ಸಂಸಾರಗಳನ್ನು ಭಾರತ ಯುವಜನಕ್ಕಾಗಿ ತರಿಸಿಕೊಡಲು ಸರ್ಕಾರ ಸಿದ್ಧವಿದೆಯೆ? ಅಲ್ಲಿಯ ವಿಶ್ವವಿದ್ಯಾಲಯಗಳಲ್ಲಿ, ವಿದ್ಯಾರ್ಥಿಯರೂ ವಿದ್ಯಾರ್ಥಿನಿಯರೂ ಒಟ್ಟುಸೇರಿ, ಕೈಹಿಡಿದು, ಹಾಡಿ, ದಣಿಯುವವರೆಗೂ ಉನ್ಮತ್ತರಾಗಿ ಕುಣಿಯುತ್ತಾರೆ. ಇಲ್ಲಿ, . . . ? ಯಾವ ಕಾಲೇಜಿನಲ್ಲಿ ಇದಕ್ಕೆ ಅವಕಾಶ ಕೊಡುತ್ತಾರೆ, ಅಧಿಕಾರಿಗಳು. ....ಸಾರ್ವಜನಿಕರು?

ಕನ್ನಡವನ್ನು ಕಲಿಯದೆಯೆ, ಮಾತಾಡದೆ, ಅಲ್ಲಿ, ಪಿ.ಎಚ್.ಡಿ. ಪಡೆಯಲು ಅವಕಾಶವುಂಟು, ಇಲ್ಲಿ ಎಂ.ಎ. ಎನಿಸಿಕೊಳ್ಳಬೇಕಾದರೂ, ಪಂಪನೊಂದಿಗೆ ಕುಸ್ತಿ ಆಡಬೇಕು; ರನ್ನನನ್ನು ಎದುರುಹಾಕಿಕೊಳ್ಳಬೇಕು. ನಾಳೆ, ಕನ್ನಡದ ಮೂಲಕವೇ ಸಂಸ್ಕೃತಿಯ ಕೃಪೆಯನ್ನು ಪಡೆಯಬೇಕಾಗುತ್ತದೊ, ಏನೊ?

ಇಂಥ ಅನುಕೂಲಗಳು ಹೊರದೇಶಗಳಲ್ಲಿ ಸಿಗುತ್ತಿರುವಾಗ, ಅವನ್ನು ತಮ್ಮವರು ಪಡೆಯಲು ವರ್ಷಂಪ್ರತಿ ಮೂರುಕೋಟಿ ಅರವತ್ತುಲಕ್ಷ ರೂಪಾಯನ್ನು ಭಾರತೀಯ ತಂದೆ ಮಾವಂದಿರು ಖರ್ಚುಮಾಡುವುದರಲ್ಲಿ ಆಶ್ಚರ್ಯವೇನಿದೆ?

— ದೊಡ್ಡತಮ್ಮಯ್ಯ.



ಸ್ಯಾಂಕಲ್ಲಿನಲ್ಲೇ ಯಾತ್ರೆಗೆ ಹೊರಟವರು

★ ಮೇಷ್ಟರ ಸಮಸ್ಯೆ ★

"ಎದೆ ಚಾಚಿ ತಲೆ ಎತ್ತಿ
ಯಾರಿಗೂ ಹೆದರದೆಯೆ
ಶೂರರಂತೆಯೆ ನೀವು, ಬಾಳಿರೋ," ಎಂದಿನ್ನು

ನಾವೆಂತು ಮಕ್ಕಳಿಗೆ
ನಾಲಗೆಯಿಂ ನುಡಿಯುವೆವು?
ನಾವೆ ನಾಗರದಂತೆ, ನೆಲದಲ್ಲಿ ಹರಿಯುತ್ತ
ಕಂಡವರ ಕಾಲ್‌ಕೆಳಗೆ ನುಸುಳುತಿರುವಾಗ

"ಪ್ರೇಮವೇ ಭಗವಂತ
ಭಗವಂತನೇ ಪ್ರೇಮ"
"ಭೇದಭಾವವ ತೊರೆದು ಬಾಳಿರೋ," ಎಂದಿನ್ನು

ನಾವೆಂತು ಮಕ್ಕಳಿಗೆ
ಉಪದೇಶ ಮಾಡುವೆವು?
ನಾವೆ ತೋಳಗಳಂತೆ, ಕುರಿಗಳನು ಹಳಿಯುತ್ತ
ಕೋಮುವ್ಯಾಘ್ರಗಳಂತೆ ಕಾದಾಡುತಿರುವಾಗ—

"ಸತ್ಯಕ್ಕೆ ನಿತ್ಯವೂ
ಚಿತ್ತವನು ಹದಮಾಡಿ
ಗಾಂಧಿಯಂತೆಯೆ ನೀವು, ಬಾಳಿರೋ," ಎಂದಿನ್ನು

ನಾವೆಂತು ಮಕ್ಕಳಿಗೆ
ನೀತಿಯನು ನುಡಿಯುವೆವು?
ನಾವೆ ಗೋಡ್ಸೆಗಳಂತೆ, ಗಾಂಧಿಯನು ಕೊಲ್ಲುತ್ತ
ಹಿಂಸೆ – ಸುಳ್ಳುಗಳಲ್ಲಿ ಕುಣಿದಾಡುತಿರುವಾಗ—

"ದೇವನೊಬ್ಬನೆ ಎಂದು
ಜಗವೆಲ್ಲ ಅವನೆಂದು
ನಂಬಿ ಮಾನವಸೇವೆ ಮಾಡಿರೋ," ಎಂದಿನ್ನು

ನಾವೆಂತು ಮಕ್ಕಳಿಗೆ
ಧರ್ಮವನು ಬೋಧಿಪೆವು?
ಅವಗೆ ಕೈಮುಗಿಯದೆಯೆ, ಮನದಲ್ಲಿ ನೆನೆಯದೆಯೆ
ಆ ದೇವ ಈ ದೇವ – ಹೊಡೆದಾಡುತಿರುವಾಗ—

— ಪಾಟಾಳಿ.

ಪ್ರಾಣೇಶನ ಆಸ್ಪತ್ರೆಯ ಅನುಭವ

ಪ್ರಾಣೇಶ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದವನು ಹಿಂದಿರುಗಿ ಬಂದ. ದೈವಕೃಪೆಯಿಂದ ಹೆಚ್ಚು ಕಡಿಮೆಯೇನೂ ಆಗದೆ ಹಿಂದಿರುಗಿ ಬಂದ

"ಏನಯ್ಯ ಹೇಗಿತ್ತು ಆಸ್ಪತ್ರೆ? ಡಾಕ್ಟರು ಸೌಖ್ಯವೆ? ನರಸಮ್ಮಗಳು ಚನ್ನಾಗಿ ನೋಡಿಕೊಂಡರೆ? ಬ್ರೆಡ್ಡು ಬೆಣ್ಣೆ ಹಾಲು ಹಣ್ಣುಗಳನ್ನೆಲ್ಲ ತಿಂದು ತೂಕ ಎಷ್ಟು ಪೌಂಡು ಏರಿತು? ಮುಖ್ಯ ಹಾಕಿ ಆಡಿ ಕಾಲು ಮುರಿದಿತ್ತಲ್ಲ; ಸೊಟ್ಟಗಾದ್ದು ಹೇಗಾಯಿತು?" — ಎಂದೆಲ್ಲ ಪ್ರಶ್ನಿಸಿದರು, ಕೆಲವರು ಸ್ನೇಹಿತರು.

ಕಣ್ಣುಗುಡ್ಡೆಗಳನ್ನು ತೇಲಿಸುತ್ತಾ ಬ್ರಹ್ಮಾನಂದವನ್ನು ವ್ಯಕ್ತಪಡಿಸಿ "ಸ್ವರ್ಗದ ಹಾಗಿತ್ತು ಕಣ್ರೋ ಆಸ್ಪತ್ರೆ" — ಎಂದ ಪ್ರಾಣೇಶ. ಅಲ್ಲಿನ ಅನುಭವಗಳನ್ನೆಲ್ಲ ವರ್ಣಿಸಿದ

ಆಸ್ಪತ್ರೆಯ ಹಾಲು ಹಾಲಿನ ಪುಡಿಯಿಂದ ತಯಾರಿಸಿದ್ದಾದರೂ ತುಂಬ ಸತ್ವವುಳ್ಳದ್ದಾಗಿ ಕಾಣಿಸುತ್ತಿತ್ತಂತೆ. ಯಾವಾಗಲೂ ಕುದ್ದಿದ್ದು ಕೊಂಚ ಜಾಸ್ತಿ ಎಂಬಂತಿದ್ದರೂ ಕುಡಿಯುವವರಿಗೆ ಕಷ್ಟವೆನಿಸಿದಂತೆ ಕಾಣಲಿಲ್ಲವಂತೆ. ಬ್ರೆಡ್ಡು ಕೂಡ ಒಳ್ಳೆ ಗಟ್ಟಿಮುಟ್ಟಾಗಿದ್ದು ರೋಗಿಗಳು ಅವನ್ನು ಚೆನ್ನಾಗಿ ಅಗಿದಗಿದು ತಿನ್ನುತ್ತಿದ್ದರಂತೆ. ಆಕಸ್ಮಾತ್ ಸಿಕ್ಕುವ ಒಂದು ಜಿರಳೆಯ ಕಾಲು ಮತ್ತೊಂದೆರಡು ಸೊಳ್ಳೆಮರಿಗಳನ್ನು ತೆಗೆದುಹಾಕಿಬಿಟ್ಟರೆ ಬೆಣ್ಣೆ ಸ್ವಚ್ಛವಾಗಿಬಿಡುತ್ತಿತ್ತಂತೆ. ಇನ್ನು ವಾಸನೆ....... ಏನೋ ಸ್ವಲ್ಪಮಟ್ಟಿಗೆ – ಆದರೂ – ಜಿಡ್ಡಿಗೆ ಕೊರತೆಯಿರಲಿಲ್ಲವಂತೆ. ಕಾಫಿ ಹೇಗೆ ಹೇಗೋ ಇದೆಯೆಂದು ಒಬ್ಬೊಬ್ಬರು ಒಂದೊಂದುರೀತಿ ವರ್ಣಿಸುತ್ತಿದ್ದರಂತೆ. 'ಬಹುಧಾ ವದಂತಿ' ಯಾದರೇನಾಯಿತು? ಕಾಫಿ ಕಾಫಿಯೇ! ಹಾಗೆ ನೋಡಿದರೆ ಕೈರೋದಲ್ಲಿಯೂ ಕಾಫಿ ಚೆನ್ನಾಗಿ ಮಾಡುಕ್ಕೆ ತಿಳಿಯದಂತೆ — ಹಾಗಂತ ಮೊನ್ನೆ ಅಲ್ಲಿಂದ ಬಂದ ನಮ್ಮ ಪತ್ರಿಕೋದ್ಯೋಗಿ ಹೇಳಿದನಂತೆ.

ಸ್ನೇಹಿತರು "ಅಲ್ಲವೋ ಯಾರು ಯಾರ ಅನುಭವಗಳನ್ನ ಹೇಳ್ತಾ ಇದೀಯಲ್ಲ. ನಿನ್ನ ಅನುಭವ ಹೇಳೋ ನಿನಗೆ ಹ್ಯಾಗನ್ನಿಸಿತು ಆಸ್ಪತ್ರೆ ಆಹಾರ?" – ಎಂದು ತಲೆ ತುರಿಸಿದರು

ಅದಕ್ಕೆ ಪ್ರಾಣೇಶ ಹೇಳಿದ–"ನನ್ನನುಭವ ಏನು ಕೇಳ್ತೀರ! ನಾನು ನುಂಗಿದ್ದು ಬ್ರಹ್ಮೇಂದ್ರ ಭವನದ ತಿಳಿಸಾರು ಅನ್ನ. ಅಲ್ಲಿನದೇ ಕಾಫಿ. ನನ್ನ ಕಾಲು ಕುಂಟಾಗಿ

ದ್ದರೂ ಜರರದ ಪುಟ್ಟಿಗೆ ಜಟ್ಟಿಯೇ ಆದ್ದರಿಂದ ಹೋಟಲಿನದು ಏನಿದ್ದರೂ ಸರಿಯೆ. ಆ ಅನುಕೂಲದ ಮಟ್ಟಿಗೆ ಆಸ್ಪತ್ರೆ ಪರವಾಗಿಲ್ಲವೆಂದೇ ಹೇಳಬೇಕು ಆಹಾರದ ಸರಬರಾಜಿಗಾಗಿ ದುಡ್ಡು ತೆಗೆದುಕೊಂಡರೂ ಬೇರೆ ಕಡೆಯದನ್ನು ತಿನ್ನುಕ್ಕೆ ಬಿಡುತ್ತಾರಲ್ಲ ಅದೇ ಒಂದು ಕೃಪೆ"

ಈ ಅನುಕೂಲ ಎಲ್ಲರಿಗೂ ಇದೆಯೋ ಎಂದು ತಿಳಿಯುವುದಕ್ಕಾಗಿ ಗೆಳೆಯರು ಆತುರಪಟ್ಟರು.

ಅದಕ್ಕೆ ಪ್ರಾಣೇಶ "ಛೆ ಛೆ ಇಲ್ಲದೆ ಏನಂತೆ! ನಾವು ಸ್ಪೆಷಲ್ ವಾರ್ಡಿನವರು ನಮ್ಮ ನಮ್ಮ ಜವಾನರಿಂದ ಊಟ ಕಾಫಿ ತರಿಸುತ್ತಿದ್ದರೆ ಜನರಲ್ ವಾರ್ಡಿನವರಿಗೆ ಆಸ್ಪತ್ರೆಯ ತೋಟಿಗಳೇ ಬೇಕು ಬೇಕಾದ್ದನ್ನು ಇಚ್ಛೆಪಟ್ಟವರಿಗೆ ಒದಗಿಸುತ್ತಿದ್ದರು" ಎಂದ

"ಅಂದಮೇಲೆ ನಿನಗೆ ಆಸ್ಪತ್ರೇಲಿ ಕೊಡುತ್ತಿದ್ದ ಆಹಾರಾನೆಲ್ಲ ಏನ್ಮಾಡ್ತಾ ಇದ್ದೆ? ತಿಪ್ಪೇಗೆಸೀತಿದ್ದೆಯಾ?"

"ತಿಪ್ಪೆಗೆ ಯಾಕೆ ಎಸೀಲ್ರೋ! ಆ ಋಣಭಾಗಕ್ಕೆ ಬಾಯಿಬಿಡೋವು ಎಷ್ಟು ಮಂದಿ ಅಂತ ಮಾಡಿದೀಯ! ಆಸ್ಪತ್ರೆ ಕಾಂಪೌಂಡಿನಾಚೆ ಮೂಲೆಯಲ್ಲಿ ಅವರಿಗೆ ಸರಬರ್ರಾಜಾಗಿಬಿಡುತ್ತಿತ್ತು. ಆಸ್ಪತ್ರೇಲಿ ಸೀಟು ಬೇಡ; ಅದರ ಕಾಂಪೌಂಡು ಮೂಲೇಲಿ ಬಿದ್ದಿರೋದಕ್ಕೊಂದಷ್ಟು ಜಾಗ, ಆಗಷ್ಟು ಈಗಷ್ಟು ಬ್ರೆಡ್ಡು ಹಾಲು — ಬೇರೆಯವರಿಗೆ ಬೇಡಾದ್ದು — ಇಷ್ಟು ಸಿಕ್ಕಿದರೆ ಒದುಕಿ ಬಿಡುತ್ತೇವೆಂದು ಯಾವ ರೋಗವಿದ್ದರೂ ಜೀವ ಹಿಡಿದುಕೊಂಡು ನಿಂತಿರೋ ಮಂದಿ ನಮ್ಮ ದೇಶದಲ್ಲಿ ಎಷ್ಟಿದಾರೇಂತ ಗೊತ್ತಿಲ್ಲಕಣ್ರೋ ನಿಮಗೆ"–ಎಂದು ಪ್ರಾಣೇಶ ಎತ್ತಲೋ ನೋಡುತ್ತ ಹೇಳಿದ.

"ಸರಿ ಅಂಥವರಿಗೆ ಕೈಲಾದ್ದನ್ನು ಕೊಟ್ಟು ಪುಣ್ಯಕಟ್ಟಿಕೊಂಡೆಯಲ್ಲ ಧನ್ಯನಾದೆ ಬಿಡು. ಇನ್ನು ಆಸ್ಪತ್ರೆ ಸಮಾಚಾರ ಬೇಡ ಬಿಡು... ....ಸದ್ಯ ನಿನಗೆ ಪೂರ್ತಿ ಗುಣವಾಯಿತಲ್ಲ ಅದೇ ಮುಖ್ಯ" – ಎಂದರು ಗೆಳೆಯರು.

"ಗುಣವಾಗದೆ ಏನಂತೆ! ದೇವರ ದಯೆಯಿದ್ದರೆ ಎಲ್ಲವೂ ವಾಸಿಯಾಗೇ ಆಗುತ್ತೆ" — ಎಂದ ಪ್ರಾಣೇಶ.

"ಅಂದರೆ ಡಾಕ್ಟರ ಚಿಕಿತ್ಸೆಯಿಂದಲ್ಲಾಂತ ನೀನು ಹೇಳೋದ"

ಹಾಗಂದನೆ? ಅವರೂ ಕೈಲಾದಷ್ಟು ಪ್ರಯತ್ನಪಡುತ್ತಾರೆ ಪಾಪ. ಆದರೆ ಔಷಧಿಗಳು ಕೈಗೆ ಸಿಕ್ಕೋದೇ ಒಂದೆರಡು ದಿನ ವಿಳಂಬವಾಗಿ ಫಜೀತಿಯಾಗಿಬಿಡುತ್ತೆ, ಎಷ್ಟೋಸಲ, ಪಾಪ."

"ಹಾಗಂದರೇನಯ್ಯ!....ಆಸ್ಪತ್ರೇಲಿ ಔಷಧಿ ಇಲ್ಲದಿರೋದು ಅಂದರೆ...."

"ಔಷಧಿ ಇರುತ್ತೆ ಕಣಯ್ಯ ಬೀರುಗಳಲ್ಲಿ ಆದರೆ ಅವನ್ನ ತೆಗೀಬಹುದು ಎಂಬ ಆರ್ಡರಿಗೆ ದೊಡ್ಡ ಡಾಕ್ಟರು ಸಹಿಮಾಡೋತನಕ ತೆಗೆದುಬಿಡೋಕ್ಕಾಗ ತ್ತೇನಯ್ಯ? ರೂಲ್ಸೂ ಗೀಲ್ಸೂ ಇಲ್ಲಾಂತ ಮಾಡಿದೀಯ?"

"ಆತನಿಗೇನಂತೆ ಧಾಡಿ; ಕೂಡ್ಲೆ ಕೂಡ್ಲೆ ಸಹಿಮಾಡಿ ಔಷಧಿಗಳೆಲ್ಲಾ ಬೇಗನೆ ಸಿಗೋಹಾಗೆ ಮಾಡಿದರೆ—"

"ಅದಕ್ಕೇ ನೋಡು ನಮ್ಮಲ್ಲಿ ಪಬ್ಲಿಕ್‌ಗೆ ಕ್ರಮ ರೂಲ್ಸು ಅಂದರೆ ಏನಂತ ತಿಳಿಯೋದಿಲ್ಲಾ ಸ್ನೋದು. ಅಲ್ಲಕಣಯ್ಯ ರೂಲ್ಸಂದ್ರೆ ರೂಲ್ಸೇ! ಯಾರು ಯಾರು ಸಾಯ್ತಾರೇಂತ ಆ ದೊಡ್ಡ ಡಾಕ್ಟರು ಎಷ್ಟಂತ ಒದ್ದುಕೊಳ್ಳೋಕಾಗುತ್ತೆ ಪಾಪ ರೋಗಿಗಳೇನು ಒಬ್ಬ ಹೋದರೇನು ...ಮತ್ತೊಬ್ಬ ಬಂದೇ ಬರುತ್ತಾನೆ. ಬೆಡ್ಡುಗಳೇನು ಖಾಲಿಬಿದ್ದಿರುತ್ತವೆಯೇ? ರೂಲ್ಸು ಮುಖ್ಯ........ಆ ನರಸಮ್ಮಗಳಾದರೂ ಹಾಗೆಯೇ ಎಲ್ಲವೂ ಕ್ರಮಪ್ರಕಾರವಾಗಿಯೇ ಮಾಡುತ್ತಾರೆ. ಒಬ್ಬ ಪೇಷಂಟಿಗೆ ಇದ್ದಿದ್ದಹಾಗೇ ಭೇದಿಗೆ ತೊಡಗಿತು ಅನ್ನ. ಡಾಕ್ಟರು ಬರುತ್ತಾರೆ. ಅವನ ಡಯೆಟ್‌ನಲ್ಲಿ ಬದಲಾವಣೆ ಸೂಚಿಸುತ್ತಾರೆ. ಆದರೆ ಆ ಕೂಡಲೆ ಬೇರೆ ಆಹಾರ ಬರಬೇಕೆಂದರೆ ಹೇಗೆ? ಡಾಕ್ಟರ್ ಸೂಚಿಸಿದ ಆ ಬದಲಾವಣೆ ಒಬ್ಬರಿಂದ ಒಬ್ಬರಿಗೆ ಹೋಗಿ ಒಂದು ಪುಸ್ತಕದಿಂದ ಇನ್ನೊಂದಕ್ಕೆ ಎಂಟರಾಗಿ ಕೊನೆಗೆ ಹೊಸ ಡಯೆಟ್ ಜಾರಿಗೆ ಬರಬೇಕಾದರೆ ಹತ್ತಿಪ್ಪತ್ತು ಗಂಟೆಗಳಾದರೂ ಬೇಕು. ಆ ತನಕ ರೋಗಿ ಮೊದಲಿನ ಆಹಾರವನ್ನೇ ತಗೋತಿರಬೇಕಾದ್ದು ಅನಿವಾರ್ಯ. ಹೀಗೆ ತಡವಾದ್ದರಿಂದ ಇನ್ನೂ ಹತ್ತಿಪತ್ತುಸಲ ಪ್ರವೃತ್ತಿಯಾಗಬಹುದೆಂಬುದೇನೋ ನಿಜ. ಅದರಿಂದ ಅವನೇನು ಸಾಯ್ತಾನೆಯೆ? ಒಂದೊಮ್ಮೆಗೆ ಗೊಟಕ್ ಅಂದ ಎಂದುಕೊಳ್ಳೋಣ. ಅದೇನು ಮಹಾ! ಆಸ್ಪತ್ರೆಗಳಿರೋದು ಯಾತಕ್ಕೆ? ಆಸ್ಪತ್ರೆ ತೋಟಿ ಹೇಳ್ತಾ ಇದ್ದಹಾಗೆ "ಭೂಮಿ ಋಣ ತೀರಿದಮೇಲೆ ಹೊರಟುಹೋಗೋದೆ!"

"ಅವನ ಮುಂಡ ಮೋಚಿತು ...ಅವನ ವೇದಾಂತಕ್ಕೆ ಬೆಂಕಿ ಇಟ್ಟಿತು"–ಎಂದು ಗೆಳೆಯರೊಬ್ಬರು ಹಲ್ಲುಕಡಿದರು.

"ಛೆ ....ಹಾಗೆನ್ನಬೇಡಪ್ಪ. ಆ ಮುದುಕ ಜಾಡಮಾಲೀದು ಶಿಸ್ತು ಅಂದರೆ ಎಂಥಾದ್ದಂತೀಯ. ಒಂದುದಿನ ಆತ ಜನರಲ್ ವಾರ್ಡಿನಲ್ಲಿ ಹೀಗೆಯೇ ನಿಂತಿದ್ದ. ಅವನ ಡ್ಯೂಟಿ ಸಮಯ ಮುಗಿದಿತ್ತು. ಪೇಷಂಟೊಬ್ಬ ಜಲಭಾಧೆ ತಡೆಯಲಾರದೆ ಈತನ ಹತ್ತಿರ ಪಾತ್ರೆ ತಾ ಅಂತ ಹೇಳಿದ. ಈತ ತರೋದಾದರೂ ಹೇಗೆ? ಡ್ಯೂಟಿ ಟೈಮ್ ಮುಗಿದಿತ್ತು. ಶಿಸ್ತಂದರೆ ಶಿಸ್ತೇ! ಪೇಷಂಟೇನೋ ಅಂಗಲಾಚಿದ. ಆತನಿಗೆ ಏಳೋದಕ್ಕೆ ಶಕ್ತಿಯಿಲ್ಲ. ಆದರೆ ಈತ ಏನು ಮಾಡಿಯಾನು? ಡ್ಯೂಟಿಯವನು ಬರುತ್ತಾನೆ ಕಾದಿರು ಎಂದು ಗದರಿಸಿದ. ಆದರೆ ಆ ಪ್ರಾಣಿ ತನ್ನ ಪಕ್ಕದಲ್ಲಿದ್ದ

ಊಟದ ಬಟ್ಟಲನ್ನೇ ಉಪಯೋಗಿಸಿ ಜಲಬಾಧೆ ತೀರಿಸಿಕೊಂಡ. 'ಹೊಲಸು ಪ್ರಾಣಿಗಳು ಮಾಡೋ ಕೆಲಸಾ ನೋಡಿ' ಅಂತಾ ಇದ್ದ ನಮ್ಮ ಜಾಡಮಾಲಿ ಕೊನೆಗೆ "

"ಥೂ . " ಎಂದರು ಸ್ನೇಹಿತರು

"ರೇಗಬೇಡಿರೋ . ....ಆಸ್ಪತ್ರೆ ಅಂದರೆ ಹಾಗೆಯೇ. ಅಲ್ಲಿ ನಾವು ಕಲಿಯಬೇಕಾದ್ದು ಬೇಕಾದಷ್ಟಿದೆ. ಇನ್ನೊಂದು ಅನುಭವ ಹೇಳ್ತೀನಿ ಕೇಳಿ. ಯಾರಿಗಾದರೂ ಆಪರೇಶನ್ ಆಗಬೇಕಾದ್ದಿದ್ದರೆ ಆಪರೇಶನ್ ಮುನ್ನಾದಿನ ಆಪರೇಶನ್ ಆಗಬೇಕಾದ ಭಾಗಕ್ಕೆ ವಪನವಾಗಬೇಕು. ಆದಕ್ಕಾಗಿ ಆ ಕೆಲಸ ಬಲ್ಲವರು ಆಸ್ಪತ್ರೆಯಲ್ಲಿದ್ದಾರೆ. ಪಕ್ಕದ ಕೋಣೆಯವರೊಬ್ಬರು ಅಂಥ ನಾಯಿಂದನೊಬ್ಬನಿಗೆ ತಮ್ಮ ಪೆಟ್ಟುಬಿದ್ದ ಕಾಲನ್ನೊಪ್ಪಿಸಿದರು. ಆತ ಕತ್ತಿ ಆಡಿಸುವ ರೀತಿಯನ್ನು ನೋಡಿ ಇವರಿಗೆ ಭಯವಾಯಿತು. "ಹಾಂ ...ಹೂಂ" – ಎಂದರು "ಕೊಂಚ ನಿಧಾನವಪ್ಪ" – ಎಂದು ಗೋಗರೆದರು. ಆದರೆ ಪೆಟ್ಟಾಗಿದ್ದ ಕಡೆ ಒಂದಿಷ್ಟು ರಕ್ತ ಬಂತೇ ಬಂತು. ಇವರು ಆಕ್ಷೇಪಿಸಿದ್ದಕ್ಕೆ ವಾರ್ಡ್‌ಬಾಯ್ ಏನಂದ ಗೊತ್ತೆ? "ಹೇಗೂ ನಾಳೆ ಶಸ್ತ್ರವೈದ್ಯರು ಕುಯ್ದುಬಿಡೋ ಜಾಗ ಅಲ್ವೇನ್ ಸಾರ್, ಯಾಕಷ್ಟು ಗಾಬರಿ?" ಇವರಿಗೆ ಏನು ಹೇಳೋದಕ್ಕೂ ತೋಚಲಿಲ್ಲ. ಕುಂಟುತ್ತ ಕೋಣೆಗೆ ಬಂದು ತಣ್ಣೀರು ಕುಡಿದು ಮಲಗಿದರು. ಅಲ್ಲವೆ ಮತ್ತೆ? ನಾಳೆ ಆಗೋದು ಆಗಬೇಕು. ನಾಳೆ ಆಗಬೇಕಾದ್ದು ಇವತ್ತು ಕೊಂಚ ಆಗಿ ಹೋದರೆ ಏನು ನಷ್ಟ? ಯಾಕೆ ಮರುಗಬೇಕು?"

"ಥೂ....ನಿಲ್ಸೋ ನಿನ್ನ ಹಾಳು ಆಸ್ಪತ್ರೆ ಸಮಾಚಾರ. ಇನ್ನು ಮಾತಾಡಿದರೆ ಜಾಗ್ರತೆ! ಒಂದು ಆಸ್ಪತ್ರೆಯಿಂದ ಬದುಕಿ ಬಂದಿದೀಯ; ಇನ್ನೊಂದು ಆಸ್ಪತ್ರೆಗೆ ಕಳಿಸಿಯೇವು ಭದ್ರ!" — ಎಂದು ಗದರಿಸಿದರು ಗೆಳೆಯರು

ಪ್ರಾಣೇಶ್ ಇನ್ನೂ ಏನೇನೋ ಸ್ವಾರಸ್ಯವಾದದ್ದು ಹೇಳಬೇಕೆಂದಿದ್ದರೂ ಗೆಳೆಯರು ಒಪ್ಪಲಿಲ್ಲ ದೇಶ್‌ಮುಖರ ದಸ್ಕತ್ತಿನ ಚೀಟಿ ಕಂಡಕೂಡಲೆ ಸರಿಯಾಗಿ ಚಿತ್ರ ತೆಗೆಯುವ x-ray ವಿಚಾರ, ತಮ್ಮದು "ಜರ್ಮನ್‌ಗತ್ತಿ" (ಅಂದರೆ german ಕತ್ತಿ) ಎಂದು ಹೇಳಿಕೊಳ್ಳುತ್ತ ಕ್ಷೌರವಾಗಬೇಕೋ ಎಂದು ರೋಗಿಗಳನ್ನು ಕೇಳುತ್ತ ಬರುವ ನಾಯಿಂದರು, ಮತ್ತು ಅವರ ವಪನ ವೈಭವದ ವಿಚಾರ – ಎಲ್ಲಕ್ಕಿಂತಲೂ ಹೆಚ್ಚಾಗಿ ಮುಂದೆ ಈ ರಾಜ್ಯದ ಆಸ್ಪತ್ರೆಗಳಲ್ಲಿ ಇಡ್ಲಿಸಾಂಬಾರ್ ಹಂಚುವ ಯೋಜನೆಯ ಸಮಾಚಾರ – ಇವೆಲ್ಲ ಉಳಿದೇಹೋದುವು

— ರಾಮಿ.

"ಊಟಕ್ಕೆ ಏಳಿ!"


"ಏಳಿ! ಎಲೆ ಹಾಕಿದೆ" ಎಂಬ ಆಹ್ವಾನ ಬಂದಾಗ, ನಾವು ಹೇಗೆ ವರ್ತಿಸುತ್ತೇವೆ ಎಂಬುದನ್ನು ಗಮನಿಸಿದರೆ, ಜೀವನ ಕ್ಷೇತ್ರದಲ್ಲಿ ನಾವು ಹೇಗೆ ನಡೆದುಕೊಳ್ಳುತ್ತೇವೆ, ಎಂಬುದೂ ತಿಳಿದುಹೋಗುತ್ತದೆ. ಇದಕ್ಕೆ, ಭೋಜನೋಪನಿಷತ್ ಅಥವಾ ಭೋಜನ ವೇದಾಂತ, ಎಂಬ ಹೆಸರನ್ನಿಡಬಹುದು.

"ಏಳಿ" ಎಂಬ ಕರೆಬಂದಾಗ, ಹಲವರು ಛಟಕ್ಕನೆ ಎದ್ದು, ಓಡೋಡುತ್ತ ಹೋಗಿ, ಹತ್ತಿರದ ಎಲೆಮುಂದೆ ಕೂತು, ಗಬಗಬನೆ ತಿನ್ನಲು ಪ್ರಾರಂಭಿಸಿ, ಹಾಕಿ ಹಾಕಿ ಎಂದು ಕೂಗಿ, ನಾಚಿಕೆ ನೀಗಿ ಭಕ್ಷ್ಯಭೋಜ್ಯಗಳನ್ನು ತರಿಸಿ, ಕಂಠಪೂರ್ತಿ ತುಂಬಿ, ಏಳಲಾರದೆ ಕುಸಿದು, ಅಜೀರ್ಣ ತಂದುಕೊಳ್ಳುತ್ತಾರೆ. ಇಂಥವರ ಜೀವನ ದೃಷ್ಟಿಯೂ ಕೂಡ, ಇದೇ ತೆರನದೇ. ನ್ಯಾಯವೋ ಅನ್ಯಾಯವೋ, ಧರ್ಮವೋ ಅಧರ್ಮವೋ, ಗಿಟ್ಟಿಸಿದ್ದೇ ಲಾಭ, ದಕ್ಕಿದ್ದೇ ಪುಣ್ಯ, ಇವತ್ತಿನ ಊಟ ಮುಖ್ಯವೇ ಹೊರತು, ನಾಳಿನ ಹೊಟ್ಟೆನೋವಲ್ಲ, ಎಂಬುದೇ ಅವರ ವೇದಾಂತ. ಕೈ ತೊಳೆಯುವುದಕ್ಕೆ ಎದ್ದಮೇಲೆ ಮತ್ತೆ ಇಂಥದ್ದು ಸಿಗಲಾರದು. ಆದ್ದರಿಂದ, ಇತರರಿಗೆ ಉಳಿಯಲಿ ಉಳಿಯದಿರಲಿ, ತನಗೆ ಹಿತವೆನಿಸಲಿ ಅಹಿತವೆನಿಸಲಿ, ಮೂಗಿನ ಮಟ್ಟ ಹೊಡೆದುಬಿಡಬೇಕು, ಎಂಬುದು ಇವರ ದೃಷ್ಟಿ.

ಇನ್ನು ಕೆಲವರಿದ್ದಾರೆ, ನಿಧಾನಸ್ಥರು. ಏಳಿ ಎಂದಾಗ, ಅವರು, ಏಳಬೇಕೆ?, ಎನ್ನುತ್ತಾರೆ. ಹತ್ತಾರುಸಲ ಒತ್ತಾಯ ಬಂದಮೇಲೆಯೇ ಅವರು ಊಟದಮನೆಗೆ ಪ್ರವೇಶಮಾಡುವುದು. ಅಲ್ಲೂಕೂಡ, ಎಲೆಗಳ ಸಾಲಿನ ಹತ್ತಿರ ಅವರು ನಿಂತು ಅನುಮಾನಿಸುತ್ತಾರೆ. ಕೂತುಕೊಳ್ಳಿ ಎಂಬ ಆಜ್ಞೆಗೆ ಕಾದಿರುತ್ತಾರೆ. ಕೂತಮೇಲೂ, ಬಡಿಸಿದಮೇಲೂ, ಪ್ರಾರಂಭಿಸಿ, ಎಂದು ಯಾರಾದರೂ ಕೇಳಿಕೊಳ್ಳಬೇಕು. ಸಾರನ್ನ ಕಲಸಿಕೊಳ್ಳಿ, ಲಾಡು ಮುರಿಯಿರಿ, ಹಪ್ಪಳದ್ದು ರುಚಿ ನೋಡಿರಿ, ಪಾಯಸ ನೆಕ್ಕಿ ಉಪ್ಪಿನಕಾಯಿ ಸವರಿ ನಾಲಿಗೆಗೆ, ಎಂದೆಲ್ಲ ಬಲವಂತಪಡಿಸಬೇಕು. ಊಟವೆಂಬುದನ್ನು ಶಿಕ್ಷೆ ಎಂದೇ ಭಾವಿಸುತ್ತಾರೆ ಅವರು. ಹಾಗೆಯೇ, ಜೀವನವನ್ನೂ. ಯಾರ ಬಲವಂತಕ್ಕೋ ಹುಟ್ಟಿ, ಯಾವ ದಾಕ್ಷಿಣ್ಯದಿಂದಲೋ ಬದುಕಿ, ಯಾರಿಗಾಗಿಯೋ ದುಡಿದು, ಎಂಥ ತಪ್ಪಿಂದಲೋ ಮಡಿದು ಹೂಯವಾಗುವವರು ಅವರು.

ಮೂರನೆಯ ಬಗೆಯವರು, ಊಟಕ್ಕೆ ಏಳಿ, ಎಂದಾಗ, ಏಳುತ್ತಾರೆ. ಸಾಮಾನ್ಯ ವೇಗದಿಂದ, ನಡೆದುಹೋಗಿ, ಗೋಡೆ ಪಕ್ಕದ ಒಂದು ಪೀಠವನ್ನು ಆರಿಸಿ ಕೂರುತ್ತಾರೆ. ಉಪ್ಪು ಹೆಚ್ಚಾಗಿರುವುದನ್ನು ಒತ್ತರಿಸಿ, ಖಾರ ಕಡಿಮೆ ಇರುವುದನ್ನು ದೂರ ಇರಿಸಿ, ಹಿತವಾಗಿ ಮಿತವಾಗಿ, ಮೊದಲನೆಯ ತೇಗು ಬಂದಾಗಲೇ ಹುಷಾರಿ ತೆಗೆದುಕೊಂಡು, ಎರಡನೆಯ ತೇಗಿಗೆ ಮುಂಚೆಯೇ ಆಪೋಶನ ನಡೆಸಿ, ಕೂತಾಗಿನ ಲವಲವಕೆಯಿಂದಲೇ ಎದ್ದು, ಎಲೆ ಅಡಿಕೆ ಮೆಲ್ಲುತ್ತಾರೆ. ಇಂಥವರು, 'ಇಹಲೋಕವೆಂಬುದು ಕರ್ತಾಡನ ಕಮ್ಮಟ'ವೆಂದು ಚೆನ್ನಾಗಿ ಬಲ್ಲರು. ಊಟವೆಂಬುದು ದೇಹಕ್ಕೆ ಸಲ್ಲಿಸಬೇಕಾದ ಕರ್ತವ್ಯ, ಆರೋಗ್ಯ ಪಾಲನೆಗೆ ಅತ್ಯಗತ್ಯ, ಷಡ್ರಸಗಳೂ ದೇಹದೊಳಗಿನ ಜೀವರಸಕ್ಕೆ ಪೋಷಕ, ಅತಿ ಸರ್ವತ್ರ ವರ್ಜಯೇತ್, ಮಧುರೇಣ ಸಮಾಪಯೇತ್, ಎಂಬ ನಿಯತ್ತನ್ನು ಬಲ್ಲವರು ಅವರು.

— ನಾ. ಕ.



ನಾನೂ ಪ್ರೇಮಗೀತೆಗಳೂ

ನನ್ನ ಸ್ನೇಹಿತರಲ್ಲಿ ನೂರಕ್ಕೆ ನೂರು ಹತ್ತು ಜನ ಹೇಳುವುದೇನಂದರೆ 'ಬರೆಯೋ ಪ್ರೇಮಗೀತೆಗಳನ್ನು ಯಾಕೆ ಈ ಒಣಲೇಖನಗಳನ್ನು ಬರೆಯುತ್ತೀ' ಪ್ರೇಮ ಕಾಮಗಳ ಮೀಮಾಂಸದಿಂದ ಖಂಡಪುಷ್ಟಿಪಡೆದ ಅನೇಕರನ್ನು ತೋರಿಸಿ, ನನ್ನ ಮುಖದಮೇಲೆ ಉಗಿದು, ಅವರು ಮತ್ತೂ ಹೇಳುವುದೇನೆಂದರೆ 'ನಾಚಿಕೆಯಾಗುವುದಿಲ್ಲವೇನೋ ದಿನವೂ ಆವರ ಬೂಟ್ ಪಾಲಿಷನ್ನು, ಪಾದಧೂಳಿಯನ್ನು, ತಲೆಗೋ ಹಣೆಗೋ ಮೂಗಿನ ತುದಿಗೋ ಹಚ್ಚಿಕೋ'.

ನನಗೂ ಪ್ರೇಮಗೀತೆಗಳೆಂದರೆ ಆಶೆ. ಓದಲು, ಬರೆಯಲಿಲ್ಲ ಬರೆದರೆ ಏನಾಗುವುದು ಬಲ್ಲಿರಾ? ಬಲ್ಲೆ ನಾನು.

ಸಂಸಾರದಲ್ಲೆಲ್ಲರೂ ಸಿನಿಮ ಗೀತೆಗಳನ್ನು ಅರಿಚಿದರೂ ಸುಮ್ಮನಿರುವ ಜನರ ಕಿವಿಗಳೂ ಕೂಡ ನಾವು ಪ್ರೇಮಗೀತೆಗಳನ್ನು ಕತೆಗಳನ್ನು ಬರೆದಾಗ ನೆಟ್ಟಗಾಗುತ್ತವೆ.

'ನನ್ನ ಪ್ರೇಮದ ಹುಡುಗಿ ತಾವರೆಯ ಹೊಸಕೆಂಪು' ಎಂದು ನಾನು ಹಾಡು ಹೇಳಿದರೆ 'ಆಹಾ ಸಾಹಿತ್ಯ ಪ್ರೇಮಿ. ಶ್ರೀ ಶಿಷ್ಯ ಶೃಂಗಾರಸಾಗರ ಚಂದ್ರ' ಎನ್ನುತ್ತಾರೆ.

'ಇಷ್ಟ್ಯಾಕ ಹಲಬತೀ ಬಾಲೆ ಬಂದೆ ಮೀನಾಕ್ಷಿ ಪ್ರಾಣವೇ ಸಾಕ್ಷಿ' ಎಂದು ಗೊಣಗಿದರೆ 'ಬೇಂದ್ರೆಯ ಡಿಂಗರಿಗ ಇವನು. ಅರವಿಂದನ ಪಾದಧೂಳಿ' ಎನ್ನುತ್ತಾರೆ.

ಆದರೆ 'ನಾನಿನ್ನ ಪ್ರೀತಿಸುವೆ ಚಂಚಲಾಕ್ಷಿ ನೀನೆನ್ನ ಪ್ರಾಣಪಕ್ಷಿ' ಎಂಬ ದ್ವಿಪದಿಯನ್ನು ನಾನು ಬರೆದು ದುರ್ದೈವ ವಶಾತ್ ಅದು ಪ್ರಿಂಟಾದರೆ ವಕ್ರಿಸಿದ ಹಾಗೆಯೇ, ನಮ್ಮೂರಿನ ಸಾದು ಗೋಷ್ಠಿಯವರು (ಸಾರ್ವಜನಿಕ ಮರಪವಾದ ಗೋಷ್ಠಿ) ತುರ್ತು ಸಭೆಯನ್ನೇರ್ಪಡಿಸಿ ಅದನ್ನು ಚರ್ಚಿಸುತ್ತಾರೆ. ಊರಿನ ತರುಣಿಯರ ಪಟ್ಟಿಯಲ್ಲಿ ಈ ಚಂಚಲಾಕ್ಷಿಯು ಯಾವ ಸ್ಥಾನವನ್ನಾಕ್ರಮಿಸಿದ್ದಾಳೆ ಎಂಬುದರ ನಿಷ್ಕರ್ಷೆಯಾಗುತ್ತದೆ. ನಾನು ರಾತ್ರಿ ಸಿಗರೇಟು ಸೇದುತ್ತಾ ಅನ್ಯಮನಸ್ಕನಾಗಿ (ನಾಳೆ ಬೆಳಿಗ್ಗೆ ಕಾಫಿ ಯಾರ ಅಕೌಂಟಿನಲ್ಲಿ ಎಂದು ಚಿಂತಿಸುತ್ತಾ) ನಿಂತಿರಲು ಸದರೀ ಚಂಚಲಾಕ್ಷಿಗೆ ಧೂಮದೂತವನ್ನು ಕಳಿಸುತ್ತಿದ್ದಾನೆ ಈ ಎದ್ದಟ್ಟು

ಎಂಬ ಡಂಗುರ ಬೀದಿಗಳಲ್ಲಿ ಸಾರಲ್ಪಡುತ್ತದೆ. '......+ಚಂಚಲಾಕ್ಷಿ' ಎಂಬ ಮಹಾಛಂದಸ್ಸಿನ ಕಾವ್ಯ ಕಾಂಪೋಂಡ್ ಗೋಡೆಗಳ ಮೇಲೆ ವರ್ಣರಂಜಿತವಾಗಿ ಪ್ರಕಟವಾಗುತ್ತದೆ.

'ಹಾ ಅ ಅ ಕ್ಷೀ' ಎಂದು ನಾನು ಸೀನಿದರೆ ಅದು ಚಂಚಲಾಕ್ಷೀ ಎಂಬುದಕ್ಕೆ ಪ್ರಾಸ ಎಂದು ಸಾದುಗೋಷ್ಠಿಯ ಮಹನೀಯರು ಕಂಡುಹಿಡಿಯುತ್ತಾರೆ. ಆದುದರಿಂದ ಪ್ರೇಮಗೀತೆಗಳಿಗೆ ಇದೋ ನನ್ನ ನಮನ.

ಮೊನ್ನೆ ತಾನೇ ಒಂದು ಪ್ರೇಮಕತೆಯನ್ನು ಬರೆದು, ಪತ್ರಿಕೆಗೆ ಕಳಿಸುವ ಮೊದಲು ನನ್ನ ಪರಮಾಪ್ತ ಮಿತ್ರನಿಗೆ ಓದಿ ಹೇಳಿದೆ. ಈ ಕತೆಯಲ್ಲಿ ಪ್ರಥಮ ದರ್ಶನದಲ್ಲಿ ಪ್ರೇಮೋದ್ಭವವಾಗಿರಲಿಲ್ಲ. ನಾಯಕ........ನು ಸಾಲಗಾರರಿಂದ ಛೇಸಲ್ಪಟ್ಟು ಸಂತೆಯಲ್ಲಿ ಓಡುತ್ತಿರುವಾಗ, ಹೋ! ಅವನ ಕಾಲಚಪ್ಪಲಿ ಹಿಂದಕ್ಕೆ ಹಾರಿ ನಾಯಕಿಯ ಸೆರಗನ್ನು ಮೊರೆ ಹೋಗುತ್ತದೆ ನಾಯಕಿ (ಉತ್ಪಲಾ) ಅದರಿಂದ ಅವನಿಗೇ ಹೊಡೆಯಬಾರದೇಕೆ ಎಂದು ತಿಳಿದುಕೊಳ್ಳಲು ವಕೀಲರ ಬಳಿಗೆ ಹೋಗುತ್ತಾಳೆ.

ಅಷ್ಟಕ್ಕೇ ಅವನು ಆಸ್ಪ್ರೊ ಕೊಳ್ಳಲೆಂದು ಎದ್ದುಹೋದ. ಮರುದಿನ ಊರಿನಲ್ಲಿ ಒಂದು ಸುದ್ದಿ ಹರಡಿತು: 'ಲೋಕಲ್ ಅಮರಸಾಹಿತಿ ರೀತಿಯ ವ್ಯವಹಾರ ನಡೆದು, ಅಮರಸಾಹಿತಿಗೆ ಚಪ್ಪಲೀ ಕಲ್ಪವಾಯಿತು' ಎಂದು, ಹೇಗೆ ಹಬ್ಬಿರಬಹುದು? ಉತ್ತರ ಸುಲಭ ನನ್ನ ಮಿತ್ರ ನನ್ನ ಕತೆಯ ಪ್ರಾರಂಭವನ್ನು ಸಾದುಗೋಷ್ಠಿಯ ಕಾರ್ಯಕಾರಿ ಮಂಡಳಿಗೆ ತಿಳಿಸಿದ. ಆಗ ಗೋಷ್ಠಿಯ ವಿಚಾರಧಾರೆ ಹೀಗೆ ಹರಿಯಿತು 'ಲೇಖಕರ ಬರಹಗಳೆಲ್ಲಾ ಅವರ ಆತ್ಮಾನುಭವದ ಪ್ರತಿಬಿಂಬಗಳು. ಕತೆಯ ನಾಯಕ ಅಮರಸಾಹಿತಿಯೇ ನಾಯಕಿ ಉತ್ಪಲಾ ಎಂದರೆ ಕುಮುದ. ಈ ಊರಿನಲ್ಲಿ ಆ ಹೆಸರಿನ ಹುಡುಗಿ ಯಾರೂ ಇಲ್ಲ. ಕುಮುದದ ಗೆಳತಿ ಕಮಲ. ಅವಳೇ ಆ ಹೊಸ ಆಫೀಸರ ಮಗಳು.'

ಫಲಿತಾಂಶಗಳು ಎರಡು. ೧. ಆ ಕತೆಯ ನಾಯಕಿಗೆ ವಕೀಲರು ಏನಾದರೂ ಹೇಳಿರಲಿ. ಆ ಹೊಸ ಆಫೀಸರು ನನ್ನನ್ನು ಕರೆಸಿ 'ನಿನಗೇಕೆ ಚಪ್ಪಲೀ ಪ್ರಹಾರವಾಗಬಾರದು' ಎಂದು ಕೇಳಿದರು ೨. ಅದೇ ಸಂಜೆ, ನಮ್ಮೂರಿನ ಏರಿ ಮೂಲೆಯಲ್ಲಿ ನನ್ನ ಪರಮಾಪ್ತ ಮಿತ್ರನ ಎರಡು ಹಲ್ಲುಗಳನ್ನು ನಾನು ಮುರಿದೆ.

ನನಗೆ ಸಾಹಿತಿ ಎಂಬ ಪದವಿ ಬೇಡ. ನನ್ನ ಪ್ರೇಮಗೀತೆಗಳು ಕಂ ನಡಿಗ ನಡಿತಿಯರ ನಾಲಗೆಯ ಮೇಲೆ ಸುಳಿಯುದಿದ್ದರೆ ಅಷ್ಟೇ. ನಾನು ಪ್ರೇಮಗೀತೆ ಕತೆಗಳನ್ನು ಬರೆಯುವುದಿಲ್ಲ.

ಐನ್ಸ್ಟೀನ್ ಲೋಕದಲ್ಲೆಲ್ಲಾ ಪ್ರಖ್ಯಾತಿ. ಪ್ರಿನ್ಸ್‌ಟನ್ನಿನಲ್ಲಿ ನಾಮನಾಸ್ತಿಯಂತೆ. ಹಾಗೆಯೇ ನನ್ನಂಥ ಪ್ರೇಮಗೀತಕಾರರು.

ಕಾಳಿದಾಸನಿಗೆ ಸುಲಭ. ಷೇಕ್ಸ್‌ಪಿಯರಿಗೆ ಸುಲಭ, ಗಲೀಬ್, ಉಮರರಿಗೆ ಸುಲಭ ಏಕೆ ಅವರು ಬದುಕಿಲ್ಲ. ಕೆ. ಎಸ್. ನ, ಬೇಂದ್ರೆ, ಕುವೆಂಪುಗಳಿಗೆ? ಅವರ ಖ್ಯಾತಿ ಕರ್ಣಾಟಕದಲ್ಲೆಲ್ಲಾ ಹಬ್ಬಿದೆ. ಅವರೂರಿನಲ್ಲಿ ಏನೋ ಎಂತೋ? ಬಲ್ಲಿರಾ? ಅಲ್ಲದೆ ಅವರು ಮದುವೆಯಾದರು; ಏನು ಬರೆದರೂ ಚೆಂದ. ಆದರೆ ನನ್ನಂಥ ವಿವಾಹರಹಿತರಿಗೆ?

ಬಿ. ಎಸ್ಸಿ ಮುಗಿಸಿ, ಪಂಚವಾರ್ಷಿಕ ಯೋಜನೆಯಲ್ಲಿ ಉದ್ಯೋಗ ಸಿಗುವುದೆಂದು ಎಷ್ಟೋವರ್ಷ ಗಾಳಿಯನ್ನು ಕುಡಿದು ಬದುಕಿದ್ದ ನಾನು, ಕಸುಬು ಕಲಿಯಲೆಂದು ತಂಗಳೂರು ಪೋಲಿ ಟೆಕ್ನಿಕಿನ ಹೇರ್‌ಕಟಿಂಗ್ ಸೆಕ್ಷನ್‌ಗೆ ಸೇರಿದ ಸುದ್ದಿ ಪೇಪರುಗಳಲ್ಲೆಲ್ಲಾ ಬಂದುದು ನಿಮಗೆ ತಿಳಿದ ವಿಷಯವೇ ಆಗಿದೆ. ಕೆಲಕಾಲದ ನಂತರ ನಾನು ಊರಿಗೆ ಹಿಂತಿರುಗಿ ಬರುವಾಗ ಶ್ರೀ .. ....ಶ ನಿರ್ಗಮನಾರ್ಥವಾಗಿ ಅವರ ಹಾನರಿನ ಸ್ಕಿನ್ನರ್ ಪಾರ್ಟಿಯಾಯ್ತು ಎಂಬ ಸುದ್ದಿಯೂ ಬಂದಿತ್ತು. ಅದರ ಹಿನ್ನೆಲೆಯ ಕತೆಯನ್ನು ಮಾತ್ರ ನೀವರಿಯಿರಿ.

ಆ ಕಾಲದಲ್ಲಿ ನಾನು, ಬಿಡುವಿದ್ದಾಗ ಪತ್ರಿಕೆಯೊಂದರ ಸಾಹಿತ್ಯ ವಿಭಾಗಕ್ಕೆ ಗೌರವ ಸಂಪಾದಕನಾಗಿ ನಿಷ್ಕಾಮ ಸಾಹಿತ್ಯಸೇವೆ ಮಾಡುತ್ತಿದ್ದೆ. ಆದರೆ ಒಂದು ವಾರ ಧೈರ್ಯಮಾಡಿ ನನ್ನ ಕವನ ವೊಂದನ್ನು ಪ್ರಕಟಿಸಿದೆ. ನನ್ನ ಜೀವನದಲ್ಲೆಲ್ಲಾ ಅದು ಮಹಾ ಮೂರ್ಖ ಕೃತಿ.

ಒಂದು ಭಾಗ ಹೀಗಿತ್ತು

'ನಿನಗಾಗಿ ನಾಂ ಕಾವುದೆನಿತುದಿನ
ಎನಿತು ದಿನ
ವಿರಹಾಗ್ನಿಯಿಂದ ಪರಿತಪ್ತವಾಗಿಹುದು ಮನ
ಪ್ರೇಮ ಮಂದಿರ ವಿಂದು ಖಾಲಿ ಹಾ ಖಾಲಿ'

ತಪ್ಪೇನು ಇದರಲ್ಲಿ ಆದರೆ ಸಾದುಗೋಷ್ಠಿಯವರಿಗೆ ಸಹನವಾಗಲಿಲ್ಲ. ತಂಗಳೂರಿನಲ್ಲಿ 'ಪ್ರೇಮ ಮಂದಿರ'ವೆಂಬ ಬಂಗಲೆ ಯಿರುವುದೂ, ಅದರಲ್ಲಿ ಒಬ್ಬ ಅಪ್ಸರೆಯಿದ್ದುದೂ, ಅವಳು ಈ ಪದ್ಯ ಪ್ರಕಟವಾದಾಗ ಊರಿನಲ್ಲಿರದಿದ್ದುದೂ ನನಗೆ ಅರಿವಿರಲಿಲ್ಲ. ಆದರೆ ಸಾದುಗೋಷ್ಠಿ ಪತ್ತೆ ಹಚ್ಚಿತು. ಗಾಳಿಯಲ್ಲೆಲ್ಲಾ ಈ 'Love affair of the century' ಹಾರಾಡಿತು. ಹೋಯಿತು ನಮ್ಮೂರಿಗೆ ನನ್ನ ಕ್ಯಾರೆಕ್ಟರ್ ಸರ್ಟಿಫಿಕೇಟ್. ಬಂದ ನಮ್ಮಪ್ಪ ಜಾತಕದ ಹೊರೆಯೊಂದಿಗೆ ಆಗು ಮದುವೆ ಎಂದ. ಅಷ್ಟರಲ್ಲಿ ಪೋಸ್ಟ್. ಅದರಲ್ಲೊಂದು ಕಾಗದ.

ಪ್ರೇಮವೇ ಬಾಳಬಂಧನ. ನಾನು ನಿಮ್ಮ ಕ್ಲಾಸ್ಮೇಟ್ ಇಷ್ಟು ಕಾಲ ವಾವರೂ ನನ್ನ ಮೇಲಿನ ಪ್ರೇಮ ವಾರಿಲ್ಲವೆ. ನಾಳೆ ಕೋರ್ಟಿಗೆ ಬನ್ನಿ ಗಂಧರ್ವ ವಿವಾಹ' ಅಪ್ಸರೆ, ಪ್ರೇಮಮಂದಿರ.


ನಮ್ಮ ಪೋಲಿ ಟೆಕ್ನಿಕ್ ಪ್ರಿನ್ಸಿಪಾಲರಿಗೂ ನೂರಾರು ಅರ್ಜಿಗಳು ಹೋದವು.

ಈ ಹಿನ್ನೆಲೆಯಲ್ಲಿ ನನ್ನ ಹಾನರಿನ ಸ್ಕಿನ್ನರ್ ಪಾರ್ಟಿಯಾಯ್ತು.

ನೀತಿ–ಪ್ರೇಮಿಸುವುದು ತಪ್ಪಲ್ಲ ಪ್ರೇಮಗೀತೆ ಬರೆಯುವುದು ಮೂರ್ಖತನ ಪ್ರಕಟಿಸುವುದು ಮುಠ್ಠಾಳತನ.

—ಅ. ರಾ. ಸೆ.

—o—



ನಿನ್ನ ಮಗನಿಗೆ ಬಿಟ್ಟಿಯಾಗಿ ಕೆಲಸ ಕೊಡಿಸಲಿಕ್ಕೆ ನೀನೇನು ಬಿಟ್ಟಿಯಾಗಿ ಓಟು ಕೊಟ್ಟಿದ್ದೆಯಾ? ತೆಗೆದುಕೊಳ್ಳಲಿಲ್ಲವೇ ಹಣ.

ದಫೇದಾರ್ ದೇರಣ್ಣೋರು

" ಅರ್ಧಾಂಗಿಯೆರು "

ಟೋಪಿ ಹಣೆಯಮೇಲೆ ಕೂಡಿಸಿಕೊಂಡು, ಕಾಲೆಳೆದುಕೊಂಡು, ಓ ಲಕ್ಷ್ಮಣಾ ಅಂತ ಮನೆ ಸೇರುವಹೊತ್ತಿಗೆ ಸಂಜೆ ಆರು ಘಂಟೆ. ಮುಂಬಾಗಿಲಿಕ್ಕಿತ್ತು. ಬೀಗ ಬಡಿದಿತ್ತು. ನನ್ನ ತಲೆ ತಿರುಗಿತು. ಕೋಪ ನೆತ್ತಿಗೇರಿತು.

ಥತ್, ಇವಳ ಜಾಯಮಾನವೇ ಅಷ್ಟು. ಗಂಡಾನ್ನೊ ಗಂಡ್ಸು ದಿನವೆಲ್ಲಾ ದುಡಿದು ಸಂಜೆ ಮನೆಗೆ ಬಂದಾಗ, ನಗನಗತ, ಇದ್ದ ನಾಲ್ಕು ಹೂವನ್ನೇ ಮುಡಿದು, ಮುಂಬಾಗಿಲಲ್ಲಿ ಆಹ್ವಾನಿಸಿ, ಬಿಸಿಬಿಸಿಯಾದ ಕಾಫಿ ಕೈಗೆ ಕೊಟ್ಟು ನಿಲ್ಲುವುದು ಅವಳ ಹಣೇಬರಹದಲ್ಲೇ ಇರಲಿಲ್ಲ ಹಣೆಬರಹ ನಂದೇ ಇರಬೇಕು – ಇಷ್ಟೆಲ್ಲಾ ಉತ್ಸಾಹದ ಸ್ವಾಗತ ಹಾಗಿರಲಿ, ಮನೆಬಾಗಿಲು ತೆಗೆದುಕೊಂಡು ಬಿದ್ದಿರಬಾರದೆ?

"ಎಲಾ – ಗಂಡಾನ್ನೊ ಗಂಡ್ಸು, ಅವನ ಗುಂಡಿಗೆಗೆ ಗಂಡಾಂತರ ಬಾರದಿದ್ದರೇ ನನ್ನದೂ ಒಂದು ಸಂಸಾರ, ಅವನ ಹಿತ–ಅವನ ಜೊತೆ–ತರುಣಿಗೆ ಪತಿ ದೈವಂ"— ಉಹು, ಕೇಳಬೇಡಿ. ಎಲ್ಲಾ ತಳತಳಕು. ಪತಿಗೆ ಸತಿ ದೈವಂ – ಅನ್ನುವ ಪರಿಸ್ಥಿತಿ ನಂದು.

ಬಹು ಬೇಸರವಾಯ್ತು. ಹಾಳಾದ್ದು ಆಫೀಸಿನಲ್ಲೇ ಹಾಯಾಗಿ ಮಲಗೋಣ ವೆಂದರೆ ಇಲ್ಲ. ಜಾಗವೇನೋ ಇದೆ, ಆದರೆ ಆ ಹೆಡ್‌ಕ್ಲಾರ್ಕಿನ ಭಯಂಕರ ಗೊರಿಕೆ ಗಲಾಟೇಲಿ ಯಾವನಿಗೆ ನಿದ್ರೆ ಬರಬೇಕು? 'ಎಲಾ' ಇನ್ನೊಬ್ಬ ಪ್ರಾಣಿ ತನ್ನ ಹಾಗೇ ಮಲಗಿದ್ದಾನೆ, ಅವನಿಗೆ ತ್ರಾಸಾಗುತ್ತೆ ನಾನು ಹೀಗೆ ವಿಚಿತ್ರವಾಗಿ ಗೊರಕಿಸಬಾರದು' ಎನ್ನುವ ಬುದ್ಧಿಯೇ ಇಲ್ಲ ಆ ಹೆಡ್ಡಕ್ಲಾರ್ಕನಿಗೆ. ನನಗೆ ಅಂತಾನಲ್ಲಾ – ಅವತ್ತು ಮನೇಲಿ ಹೆಂಡಂದಿರನ್ನು ಹದ್ದುಬಸ್ತಿನಲ್ಲಿಡಬೇಕು–ಇಲ್ದೆ ಇದ್ರೆ ಅವನೆಂಥ ಗಂಡ್ಸೊಂತ ಟೀಕಿಸಿದನಲ್ಲಾ ಅವನೇನು ಹೆಚ್ಚು, ನಾನು ಕಾಣೆನೇ ಆ ಹೆಡ್ಡಕ್ಲಾರ್ಕನಿ ಧೀರತ್ವ. ತವರಿಗೆಹೋದ ಹೆಂಡತಿ 'ಬಾ' ಎಂದು ಬರೆಯುವ ಧೈರ್ಯವಿಲ್ಲ, ನನ್ನಮೇಲೆ ಟೀಕೆ ಮಾಡ್ತಾನೆ.

ಹೋಗಲಿ ಟೀಕಿಸಿದರೂ ಪರವಾಗಿಲ್ಲ — ಸುತ್ತಲು ಯಾರು ಇದ್ದಾರೆ ಯಾರು ಇಲ್ಲ ಅನ್ನೋದನ್ನ ನೋಡಿ ಮಾತಾಡಬೇಡವೆ. ಶ್ರೀಮಾನ್ ದಫೇದಾರ್‌ದೇರಣ್ಣೋರು ಅಲ್ಲೇ ಇದ್ದಾಗ ಈ ಮಾತಾಡಬಹುದೆ? ಅವರೇನೆಂದುಕೊಂಡಾರು. ಆ ಬೃಹನ್

ವ್ಯಕ್ತಿ ದಫೇದಾರ್ ಸಾಹೇಬರು ಅವರ ಮೀಸೆಯ ವೈಖರಿ, ಅವರ ವೈಭವದ ದಿರಸು, ಅವರ ಬೆಲ್ಟು – ಅವರ ಪೇಟ ಒಂದೊಂದೂ ನಮ್ಮ ಹೇಡಿತನ ಅವರ ಗಂಡು ಜಾಯಮಾನ, ಹೆಂಡತಿಯನ್ನು ಆಳುವ ಗಂಡುಕಳೆಯನ್ನು ಹೊರಹೊಮ್ಮಿಸುತ್ತಿತ್ತು.

ಆ ಹೆಡ್ಡು ಕ್ಲಾರ್ಕು ತಾನಿರುವ ಸಂಭ್ರಮಕ್ಕೆ ಇನ್ನೊಬ್ಬರನ್ನು ಟೀಕಿಸುವುದು ಬೇರೆ. ಟೀಕಿಸಲಿ, ಅನ್ನಲಿ, ಕೆಲಸದಲ್ಲಿ ತಪ್ಪಿದ್ದರೆ ಬೈಯ್ಯಲಿ. ಕೆಲಸದಲ್ಲಿ ತಪ್ಪು ಕಂಡುಹಿಡಿಯಲು ಅವರಪ್ಪನಿಂದಲೂ ಸಾಧ್ಯವಿಲ್ಲ. ಕೆಲಸಮಾಡಿದರೆತಾನೆ ಅವ ತಪ್ಪು ಕಂಡುಹಿಡಿಯೋದು?

ವೈಯ್ಯಕ್ತಿಕ ವಿಚಾರಗಳನ್ನು ಕಟ್ಟಿಕೊಂಡು ಅವನಿಗೇನು? ನಾವು ಮನೇಲಿ ಹೆಂಡಿರ ಸೀರೆ ಒಗೆಯಬಹುದು–ಕೋಳಿಕುಕ್ಕರಿರಬಹುದು. ದಫೇದಾರ್ರು ದೇರಣ್ಣೋರ ಮುಂದೆ ಆ ವಿಚಾರವನ್ನೇನು ಅವ ಹೇಳೋದು? "ನಿಮ್ಮ ಹೆಗಲು ಮುಟ್ಟಿನೋಡಿಕೊಳ್ರೀ – ಇನ್ನೊಬ್ಬರ ಎಲೆ ನೊಣ ಕಟ್ಟಿಕೊಂಡು ನಿಮಗೇನು–" ಎಂದು ಮುಖ ಮುರಿದಹಾಗೆ ಅಂದುಬಿಡುತ್ತಿದ್ದೆ. ಹೋಗಲೀಂತ ಉಗುಳು ನುಂಗಿಕೊಂಡೆ ದಫೇದಾರ್ರು ಏನಂದುಕೊಂಡಾರು ನನ್ನ ವಿಷಯಕ್ಕೆ ಎನ್ನುವುದೇ ನನ್ನ ಯೋಚನೆ.

ಹೀಗೆ ಯೋಚಿಸುತ್ತಲೇ ಇಕ್ಕಿದ ಮುಂಬಾಗಿಲಮುಂದೆ ಕುಕ್ಕರಿಸಿದೆ. ಇವಳೆಲ್ಲಿ ಹೋಗಿರಬಹುದು? ಒಂದು ಚೀಟಿ ಬೀಗಕ್ಕೆ ಸಿಕ್ಕಿಸಿ 'ಇಂಥಾಕಡೆ ಹೋಗಿದ್ದೀನಿ–ಇಂಥಾ ವಿಚಾರಕ್ಕೆ' ಎಂದು ನಮೂದಿಸೋಕೆ ಇವಳಿಗೆ ಆಗೋಲ್ಲವೋ? ಎಲ್ಲಿಗೆ ಹೋಗಿರಬಹುದು? ಇನ್ನೆಲ್ಲಿ ಸೌ|| ಸಾವಂತ್ರಮ್ಮ ಶ್ರೀಮತಿ ದಫೇಧಾರಿಣಿಯವರ ಮನೆಗೇ. ಅಲ್ಲೇನು ಅರಿಶಿನವೋ ಕುಂಕುಮವೋ, ಗೌರಿಯೋ ಗಂಗೆಯೋ, ಈ ಅರಿಶಿನಗಲ್ಲದ ಮುತ್ತೈದೆಯರಿಗಿನ್ನೇನು ಅದೇ.

ಎಷ್ಟುಹೊತ್ತು ಹೀಗೇ ಕಾಯುತ್ತಾ ಕೂಡುವುದು? – ಅಗೆಲ್ಲಿ; ದಫೇದಾರರ ಮನೆಗೇ ಹೋಗಿ ನೋಡಿಕೊಂಡು ಬಂದರೆ ಆಯ್ತು. ಹಾಳಾದ್ದು ಹೊಟ್ಟೆ ಬೇರೆ ತಾಳ ಹೊಡೆಯುತ್ತಿದೆ. ಮಧ್ಯಾಹ್ನದ ಟಿಫಿನ್‌ಗಿಟ್ಟಿಸೋಕೆ ಯಾವ ಬಕರರೂ ಬರಲಿಲ್ಲ.

ಒಳ್ಳೆ ಸಮಯ ದಫೇದಾರ್ರು ಈಗತಾನೆ ಮನೆಗೆ ಬಂದಿರ್ತಾರೆ. ಸೊಗಸಾದ ಪಾವಿನ ಲೋಟದಲ್ಲಿ ಮಿರಿಮಿರಿ ಎನ್ನುವ ಕಾಫಿ, ಸೊಗಸಾದ ಪರಮಾಯಿಷಿ ತುತ್ತಿಗೊಂದು ಗೋಡಂಬಿ ಬರುವಂಥಾ ಪಕೋಡ ಖಂಡಿತ ಸಿಕ್ಕುತ್ತೆ. ಸೌ|| ಸಾವಂತ್ರಮ್ಮನವರು ಪ್ರೀತಿಯಿಂದ ಕೊಟ್ಟಾಗ ಬಹು ರುಚಿ. ನನ್ನಾಕೆ ಹೇಗಿದ್ದರೂ ಅಲ್ಲೇ ಇರುವಳು. ಅವಳೂ ಕಾಫಿ ತಿಂಡಿ ಅಲ್ಲೇ ಮುಗಿಸಿದರೆ ಮನೆಯಲ್ಲಿ ಮಾಡುವುದೇ ತಪ್ಪೀತು. ಸ್ನೇಹಕ್ಕೆ ಸ್ನೇಹ – ಉಳಿತಾಯಕ್ಕೆ ಉಳಿತಾಯ.

ಈ ಯೋಚನೆ ಮುಮ್ಮಡಿ ಬಲ ಕೊಟ್ಟಿತು ನನ್ನ ಕಾಲಿಗೆ. ಆ ಮುಹೂರ್ತದಲ್ಲಿ ಲಂಕೆಗೆ ಬೇಕಿದ್ದರೂ ಜಿಗಿಯುತ್ತಿದ್ದೆ. ಆದರೆ ಜಿಗಿದದ್ದು ದಫೇದಾರ್ ದೇರಣ್ಣೋರ ಮನೆಮುಂದಿನ ಚರಂಡಿಗೆ.

ಬೃಹನ್ ಪೇಟವನ್ನು ಪಕ್ಕದಲ್ಲಿರಿಸಿಕೊಂಡು, ಕಲಾತ್ಮಕವಾಗಿ ತೂಕಡಿಸುತ್ತಾ ಭವ್ಯ ಕೋಳಿಮುಖದಲ್ಲಿ ತೇಜಃಪುಂಜವಾಗಿ ಹೊರಹೊಮ್ಮುತ್ತಿರಲು – ದಿವ್ಯವಾದ ಬೆಲ್ಟನ್ನು ಹೆಗಲಿಗೇರಿಸಿ ಮೊಳಕಾಲು ಸುತ್ತಲೂ ಕೈಗಳನ್ನು ಆವರಿಸಿ ನಿಧಾನವಾಗಿ ತೂಗುತ್ತಿದ್ದರು ದ|| ದೇರಣ್ಣೋರು. ಮನೆಮುಂದಿನ ಕಟ್ಟೆಮೇಲೆ ಕೂತಿದ್ದರು.

ಅವರ ಮನೆಯೂ ಬೀಗದಿಂದ ಕಂಗೊಳಿಸುತ್ತಿತ್ತು. ಮುಖದಲ್ಲಿ ಯಾವ ಸಿಟ್ಟೊ, ಜಿಗುಪ್ಸೆ, ಬೇಸರಿಕೆ, ಆಕಳಿಕೆಗಳೊಂದೂ ಇಲ್ಲದೆ ತದೇಕಚಿತ್ತರಾಗಿ ತೂಕಡಿಸುತ್ತಿದ್ದರು ಸೌ|| ಸಾವಂತ್ರಮ್ಮನವರು ಬೀಗಬಡಿದುಕೊಂಡು ಎಲ್ಲಿಗೋ ಹೋಗಿದ್ದರು. ಅರ್ಧಾಂಗಿಗಾಗಿ ಶ್ರೀಯುತರು ಕಾದಿದ್ದರು. ಇಬ್ಬರದೂ ಒಂದೇ ದೋಣಿಯ ಪ್ರಸಂಗವಾಗಿತ್ತು.

"ನಮಸ್ಕಾರ ದಫೇದಾರ್ ಸಾಹೇಬರಿಗೆ"

"ನಮಸ್ಕಾರ" ಎಂದು ನನ್ನ ನೋಡದೆಯೇ ಗೊಣಗಿದರು.

"ಮನೆಯವರು ಇಲ್ಲಾಂತ ಕಾಣುತ್ತೆ"

"ನಿಮಗೆ ಕಣ್ಣು ಕಾಣತ್ತೆ ತಾನೆ?" ರೇಗಿದ ಗಂಟಲಿಂದ ಹೇಳಿದರು.

"ಅಲ್ಲಾ ಕೇಳಿದೆ"

"ಏನ್ರೀ ನೀವು ಕೇಳೋದೂ. ...." ಎಂದು ಬೆಲ್ಟು ಕೈಗೆ ತೆಗೆದುಕೊಂಡರು, ಕೂತಲ್ಲಿಂದಲೇ

"ಅರರೆ.... ಇದೇನು ಸ್ವಾಮಿ ಹೀಗೆ ರೇಗ್ತೀರ ಏನೋ ಒಬ್ರೇ ಕೂತಿದ್ದಿರಲ್ಲಾಂತ ವಿಚಾರಿಸಿದರೆ ಮೈಮೇಲೆ ಬರೋದೇ". ಕಾಫಿ ಪಕೋಡ ಹಾಗೆ ಇರಲಿ ಸದ್ಯ ಬೆಲ್ಟು ಬೀಸದಿದ್ದರೆ ನನ್ನ ಪುಣ್ಯ. ಇದೇನು ದಫೇದಾರ್ರ ಸವಾರಿ ರೇಗಿದೆಯಲ್ಲಾ ... ಮತ್ತೆ ಹಾಗೇ ಸಮಾಧಾನದ ಮಾತಾಡಿದೆ.

"ಆಫೀಸಿಂದ ಸೀದ ಮನೆಗೇ ಬಂದ್ರಾ?"

"ಇಲ್ಲ–ದಾರೀಲಿ ನಮ್ಮ ಚಿಕ್ಕಪ್ಪನ ಮನೇಲಿ ಆರ್ತಿ ಎತ್ತೀ ಶೋಡಶೋಪಚಾರ ಮಾಡಿ ಕಳಿಸಿದರು ಸುಮ್ಮನೆ ಹೋಗ್ತೀರೋ ಇಲ್ರೀ ನೀವು.... ಆಂ"

—ಓಹೋ ಅದೇನೋ ಭಯಂಕರವಾಗಿದ್ದಾರೆ ಇವತ್ತು ಇವರು. ಮತ್ತೆ ಮೂಗಿಗೆ ತುಪ್ಪ ಸವರುವ ಸಂಚು ಹೂಡಿದೆ.

"ಅಲ್ಲಾ ಸ್ವಾಮೀ ಆ ಹೆಡ್‌ಕ್ಲಾರ್ಕಿನ ಮಾತು ನೋಡಿದಿರಾ?"

"ಮಾತು ನೋಡ್ಲಿಲ್ಲಾ ಕೇಳಿದೆ .... ನಿಮ್ಮ ಯೋಗ್ಯತೆಗೆ ನಿಮ್ಮ ಹೆಂಡಂದಿರನ್ನ ಆಳೋಕೆ ಬರೋಲ್ಲ ಏನೋ ಮಾತಾಡ್ತಾನೆ"

"ಸ್ವಾಮೀ ಆ ಮಾತು ಮಾತ್ರ ಆಡಬೇಡಿ"

"ಯಾಕೆ?"

"ನನಗೆ ಸಿಟ್ಟು ಬರುತ್ತೆ"

"ಹೊಟ್ಟೆ ಉರಿಯೋ ಮಾತಿಗೆ ಸಿಟ್ಟು ಬರಬೇಕಾದ್ದೇ"

"ಸರಿ ನಿಮ್ಮ ಹೊಟ್ಟೆ ಬಲು ತಣ್ಣಗಿದೆ – ಸಾವಂತ್ರಮ್ಮನವರು ಎಲ್ರೀ – ನಿಮಗೆ ಹೇಳಿ ಹೋದರೇನ್ರಿ – ಯಾಕ್ರೀ ಈ ಜಬರದಸ್ತಿ ಯಾತರದೋ ಮಾತಾಡ್ತಾರೆ. ಮಹಾ ಜಗದಂತೆಂಬರ ಗಂಡಾನ್ಹೊ ಹಾಗೆ ಹಾರಾಡ್ತಿರೇ ..."

"ಅದಕ್ಕೇ ಕಣ್ರೀ ನಿಮ್ಮ ಮುಖಕ್ಕೆ ಮಂಗಳಾರತೀಂತ ಅಂದದ್ದು.... ನಿಮ್ಮ ಯೋಗ್ಯತೆಗೆ ಬೆಂಕಿ ಬಿತ್ತು"

—ಎಂದವರೇ ಪೇಟವನ್ನು ಎತ್ತಿಹರು ಅದರ ಕೆಳಗೊಂದು ಚೀಟಿ ಇತ್ತು. ತೆಗೆದು ನನ್ನ ಕೈಗೆ ಕೊಟ್ಟು ಗೋಡೆಗೆ ಒರಗಿ ಕುಳಿತರು – ಜೇಬಿನಿಂದ ಪಕೋಡ ಪೊಟ್ಟಣ ತೆಗೆದು ಆರಾಮವಾಗಿ ಕರಂಕುರುಂಸತೊಡಗಿದರು.

ಚಕಿತನಾಗಿ ಪತ್ರ ಓದಿದೆ. ಹೀಗಿತ್ತು.—

—: ಶ್ರೀ ತುಪ್ಪದಾಂಜನೇಯ ಪ್ರಸನ್ನ :—

ಪ್ರಿಯರೇ,

ನಮಸ್ಕಾರಗಳು. ನಿಜ ನಿಮಗೆ ಕೋಪ ಬಂದಿದೆ. ಹುಬ್ಬು ಗಂಟಿಕ್ಕಿದೆ. ಅದು ಗಂಡಿನ ಜಾಯಮಾನವೇಹೊರ್ತು ನಿಮ್ಮ ತಪ್ಪಲ್ಲ. ತುಪ್ಪದ ಆಂಜನೇಯನ ಗುಡೀಂತ ಕೇಳಿದ್ದೀರಾ! ನಾನೊಂದು ಕೇಳಿದ್ದೀರಾಂತ ಅಂದೆನಲ್ಲಾ – ಅನೇಕವೇಳೆ. ಆ ಗುಡಿಯ ಬೀದಿಯಲ್ಲಿ ಬೀಟು ತಿರುಗಿರಬೇಕು ನೀವು. ತುಪ್ಪ – ಬೆಣ್ಣೆ ಕಾಯಿಸಿದರೆ ಆಗುವಂಥಾ ಜಿಡ್ಡು ಪದಾರ್ಥ. ಅಮೆರಿಕಾದವರೂ ನಮಗೆ ತುಪ್ಪ ಕಳಿಸಿದ್ದಾರಂತೆ. ನೇರವಾಗಿ ಬೆಣ್ಣೆಯನ್ನೇ ಹೇಗೆ ಕಳಿಸುವುದೂ ಎಂದು ಹೀಗೆ ಮಾಡಿರಬಹುದು. ಬೆಣ್ಣೆ ಅದರ ವಿಷಯ ನಿಮಗೆ ಗೊತ್ತಿರಬೇಕು. ಇಲ್ಲ ಗೊತ್ತಿಲ್ಲ. ನಿಜವಾಗಿ ಗೊತ್ತಿಲ್ಲ. ಅದನ್ನು ನೀವು ಸರಿಯಾಗಿ ಉಪಯೋಗಿಸದಿರುವುದರಿಂದಲೇ ಇನ್ನೂ ದಫೇದಾರರಾಗೇ ಇರುವುದು. ದಫೇದಾರರ ಹೆಂಡತಿ ಎಂದೆನಿಸಿಕೊಂಡು ನನಗೆ ಸಾಕಾಗಿಹೋಗಿದೆ.

ನೀವು ಸಬ್‌ಇನ್ಸ್‌ಪೆಕ್ಟರಾಗುವವರೆಗೂ ನಾನು ನಿಮ್ಮ ಮನೆಗೆ ಕಾಲಿಡೋಲ್ಲ. ಅಂದರೆ ನೀವು ನನ್ನ ಮನೆಗೆ ಕಾಲಿಡಬಹುದು. ಸಧ್ಯಕ್ಕೆ ನನ್ನಮನೆ ತೌರುಮನೆ. ಸಂಜೆ ನಾಲ್ಕರ ರೈಲಿಗೆ ಊರಿಗೆ ಹೊರಟದ್ದೇನೆ. ನನ್ನನ್ನು ಬಾಗೂರಿಗೆ ಕಳಿಸಲು ಸ್ಟೇಷನ್‌ತನಕ ಸೌ|| ಮೀನಾಕ್ಷಮ್ಮನವರೂ ಬಂದಿದ್ದಾರೆ. ಅವರ ಯಜಮಾನರೂ ಮನೆಬೀಗ ನೋಡಿ ನಿಮ್ಮಲ್ಲಿಗೇ ಬರಬಹುದು. ಮೀನಾಕ್ಷಮ್ಮನವರು ಈಗ ಬಂದು ಬಿಡುತ್ತಾರೆ ಅಲ್ಲಿಯೇ ಕೂತಿರುವಂತೆ ಹೇಳಬೇಕಂತೆ.

ಇನ್ನು ನಾನು ರೈಲು ಹತ್ತುವೆ. ಪ್ರಿಯರೇ ನಿಮ್ಮನ್ನು ಬಿಟ್ಟಿರುವುದು ನನ್ನಿಂದಾಗದು. ಆದರೂ ಶ್ರೀಮತಿ ದಫೇಧಾರಿಣಿಯಾಗಿ ಎಷ್ಟುದಿನ ಪಕೋಡ ಕರಿಯಲಿ? ಹೀಗೆ ಇದ್ದರೆ ನೀವು ತುಪ್ಪದಾಂಜನೇಯನ ಧ್ಯಾನವನ್ನ ಮರೆತು – ಬೆಣ್ಣೆಯಾಂಜನೇಯನ ನೆನಪನ್ನೇ ಮಾಡದೆ ಹಾಯಾಗಿ ನನ್ನ ಮುಖ ನೋಡಿಕೊಂಡಿರುವಿರೆಂದು ಗೊತ್ತು.

ಈ ಕಾರಣಗಳಿಂದಲೇ ನಾನು ತವರೂರಿಗೆ ಹೋಗಿದ್ದೇನೆ. ಮನೆ ಬೀಗದಕೈ ಸೌ|| ಮೀನಾಕ್ಷಮ್ಮನವರ ಹತ್ತಿರ ಕೊಟ್ಟು ಕಳಿಸುತ್ತೇನೆ.

ಮರೆಯಬೇಡಿ. ತುಪ್ಪ, ಬೆಣ್ಣೆ, ಆಂಜನೇಯ, ಸಬ್‌ಇನ್ಸ್‌ಪೆಕ್ಟರು. ನಿಮಗೆ ತೀರ ಬೇಸರವಾದರೆ ಬಾಗೂರಿಗೇ ಬಂದುಹೋಗಿ. ಬೈ. ಬೈ.

ಇತಿ ನಿಮ್ಮ ಸತಿ,
ಸಾವಂತ್ರಿ.

—ನಾನು ಸುಸ್ತು. ಬರೀ ಹೆಡ್ಡಕ್ಲಾರ್ಕು ಸ್ವಯಂಪ್ರತಿಷ್ಟೆಯಲ್ಲಿ ರೇಗುತ್ತಿದ್ದವನಿಗೆ ಜ್ಞಾನೋದಯವಾಯಿತು. ಮಲಗುವಾಗ (ಆಫೀಸಲ್ಲಿ) ಮಗುಲಲ್ಲಿ ಬೆಣ್ಣೆಯ ಮಡಿಕೆ ಇಟ್ಟೆ ಮಲಗಬೇಕು. ಆದರೆ ಬೆಣ್ಣೆ ಎಲ್ಲಿಂದ ತರುವುದು? ಅಮೆರಿಕಾ ತುಪ್ಪದಿಂದ ಬೆಣ್ಣೆಮಾಡಲು ಸಾಧ್ಯವೆ? ರಷ್ಯಾದವರನ್ನೆ ಕೇಳಬೇಕು. ನಮ್ಮ ನೆಹರೂ ಈ ರಷ್ಯಾಕ್ಕೆ ಹೋಗಿಲ್ಲವೇ ಅವರಿಗೊಂದು ಕಾಗದ ಹಾಕಿದರೆ – ಅಮೆರಿಕಾ ತುಪ್ಪದಿಂದ ರಷ್ಯಾ ಬೆಣ್ಣೆ ಕರಗಿಸುವ ವಿಧಾನ ತಿಳಿಸಿಯಾರು!

ಯಾವುಯಾವುದೋ ಮಾತಾಡುತ್ತಾ ಇದ್ದಂತೆ ಹಿಡಿಂಬಿ ಪ್ರತ್ಯಕ್ಷವಾದಳು. ಅರ್ಥಾತ್ ನನ್ನ ಅರ್ಧಾಂಗಿ ಮೀನಾಕ್ಷಿ ಸ್ಟೇಷನ್ನಿನಿಂದ ಬಂದಳು. ಶ್ರೀಮಾನ್ ದಫೇದಾರರಿಗೆ ಅವಳಿಗೆ ಮುಖ ತೋರಿಸಲೇ ನಾಚಿಕೆ. ಅವಳೇ ಕೇಳಿದಳು.

"ಚೀಟಿ ಸಿಕ್ತೇ? ..." ಎಂದು.

—ನಾನು ಅದನ್ನು ದಫೇದಾರ್ರಿಗೆ ಕೊಟ್ಟೆ. ನನ್ನ ಪಾಡೇ ವಾಸಿಯಾಗಿತ್ತು ಸಧ್ಯ ಇವಳು ನಾನು ಹೆಡ್‌ಕ್ಲಾರ್ಕ್ ಆಗುವವರಗೆ ನಿಮ್ಮ ಮುಖ ನೋಡಲ್ಲಾಂತ ತವರಿಗೆ ಓಡಿದ್ದರೆ ಏನುಮಾಡೋದು? ಬೀಗದಕೈ ದಫೇದಾರ್ರಿಗೆ ಕೊಟ್ಟು ನನಗೆ "ನಡಿರಿ ಮನೆಗೆ" ಎಂದಳು ಮೀನು, ಮೀನಿನಂಥ ಕಣ್ಣುಬೀರಿ. ನಾನು ಹುಳ್ಳ ಹಿಂದುಬಿದ್ದೆ ಮಾತಾದಡೆ

"ನಿಮ್ಮ ಬುದ್ಧಿಗೆ ಏನು ಹೇಳಲಿ – ದಫೇದಾರ್ರು ಕಾಫಿ ಕುಡಿದರೋ ಇಲ್ವೋ— ಮನೆಗೆ ಕರೀಬಾರದೆ – ಹಾಗೇ ಊಟಕ್ಕೂ ಹೇಳಿ" ಎಂದಳು

— ಮನೆಬೀಗ ತೆಗೆದಿದ್ದ ದಫೇದಾರ್ರಿಗೆ ಆಹ್ವಾನಿಸಿದೆ. ಹಾಗೇ ಬೀಗ ಹಾಕಿ ಅವರೂ ಹೊರಟರು. ಅವರು ಹೇಳಿದ್ದು ಒಂದೇಮಾತು "ಶ್ರೀ ತುಪ್ಪದಾಂಜನೇಯ"

— ದಾಶರಥಿ ದೀಕ್ಷಿತ್.

ಕವಿಕರ್ಮ

ಪೂರ್ವಕರ್ಮವು ನಮ್ಮದು—
ಸೊಗಸುಕವಿಗಳನಿಕ್ಕಿ ಮೆಟ್ಟಿದ
ನವ್ಯಕವಿಗಳ POWER ಅದು!
ಅಪರಕರ್ಮವು ನಿಮ್ಮದು—
ಯಾರು ಏನೇ ಬರೆದರೂ ಅದ
ಓದಬೇಕಾದವರದು! — ೧ —

ನಾನೊಂದು ಕವಿ – ಹೊಸಬ – ನವ್ಯ!
(ಎಂದರೇನೇ? ಅಚ್ಚಕನ್ನಡದ – ಎಡಚ!)
ಇದು ನನ್ನ NEW ಕವಿತೆ – ನವ್ಯ!
(ನಿಮಗೆ ತಿಳಿಯುವಹಾಗೆ ಹೇಳಿದರೆ – ಪಡಚ!)
ದಾನವರಿಗಿದು ಹವ್ಯ!
ದೇವತೆಗಳಿಗೆ ಕ್ರವ್ಯ!
ನರಮನುಷ್ಯರಿಗನಕ – ಓ! ದಿವ್ಯ
ಗೋಮಾತೆಯುದರದಿಂದಿಳಿತರುವ – ವ್ಯಾ! ವ್ಯಾ!
ಗೊಂಡೆಬಾಲದ ಬಳಿಯ ಗವ್ಯ! — ೨ —

ಕವಿಯೆ ಸುತ್ತಿಗೆ, ಕಾವ್ಯ ಅಡಿಗಲ್!
ಇವನ, ಅದರಾನಡುಗಡೆ—
ಇಂದು ಈ ಕವಿ, ನಾಳೆ ಆ ಕವಿ—
ಸಿಕ್ಕಿದವರಿಗೆ ಸುಡುಗಡೆ!
ಸುಡುವ ಕಡೆಯೋ ಸುಡುವ ಕಾಡು!
ಬೇಡ, ವಾಚಕ ಪಡುವ ಪಾಡು! — ೩ —

ಕವಿ : ಕಂಡವರ ಕಾಲಬಳಿ ನಾ ಕಲಿಯಲಿಲ್ಲ!
ವಾಚಕ : ಕಲಿತದ್ದು ಬುದ್ಧಿ?
ಕವಿ : ಗುರು – ಸ್ವಯಂಬುದ್ಧಿ!
ವಾಚಕ : ಓ! ಅದಕೆ ಹೀಗೆಲ್ಲ! — ೪ —

— ಗುಂಡಯ್ಯ.

ಮನೆ ದೇವರು

ಮಾರುತಿ ನಮ್ಮ ಮನೆದೇವರು. ನಮ್ಮ ತಾತನ ಹೆಸರು ವೀರಾಂಜನೇಯುಲು ಅಂತ. ನಮ್ಮ ಅಪ್ಪನ ಹೆಸರು ಹನುಮಂತಪ್ಪ. ನನ್ನ ಹೆಸರು ಹನುಮಂತರಾವ್ ಹೀಗೆ ನಮ್ಮ ವಂಶದಲ್ಲಿ ಎಲ್ಲರೂ ಮಾರುತಿ ಹೆಸರಿನವರೇ.

ಹೆಸರಿಗನುಗುಣವಾಗಿ ನಮ್ಮ ತಾತ ಮುತ್ತಾತಂದರು ಬಹಳ ಪರಾಕ್ರಮಶಾಲಿಗಳು. ಆ ಆಜಾನುಬಾಹು ಅವರಿಗೆ ಬಾಹುಬಲವನ್ನೂ, ಸಕಲ ವಿದ್ಯೆಯನ್ನೂ ಬಿಗಿಮನಸ್ಸನ್ನೂ ಅನುಗ್ರಹಿಸಿದ್ದ. ಅವರೆಷ್ಟು ಗಟ್ಟಿಗರು, ಕೆಚ್ಚೆದೆಯವರು ಎಂದು ಈಗಲೂ ನಮ್ಮೂರಿನಲ್ಲಿ ಅವರ ಸಾಹಸ ಕೃತ್ಯಗಳನ್ನು ಕೆಲವು ಹಳೆಯ ತಲೆಗಳು ವರ್ಣಿಸುತ್ತಾರೆ!

ನಮ್ಮ ಮುತ್ತಾತ ಮೂವತ್ತು ಅಡಿ ಅಗಲವಿದ್ದ ನಮ್ಮೂರು ಹುಚ್ಚು ಹೊಳೆಯನ್ನು ಛಂಗನೆ ನೆಗೆಯುತ್ತಿದ್ದರಂತೆ. ನಮ್ಮತಾತ ಒಬ್ಬರೇ ಅದಕ್ಕೆ ಸೇತುವೆ ಕಟ್ಟಿದರಂತೆ. ಹತ್ತುಜನ ಹೊರಲಾರದ ಹೊರೆಯನ್ನು ಹೊತ್ತುತರುತ್ತಿದ್ದರಂತೆ ಒಂದು ಸಲ ಇಬ್ಬರು ಪಂಜುಕಳ್ಳರು ನುಗ್ಗಿದರಂತೆ ನಡು ನಿಶಿಯಲ್ಲಿ. ಕಳ್ಳರು ಕನ್ನ ಕೊರೆಯುವಾಗಲೇ ನಮ್ಮ ತಾತನಿಗೆ ಎಚ್ಚರವಾಯಿತು. ಆಗ ತಾತ ನೆಟ್ಟಗೆ ಅಡಿಗೆ ಮನೆಗೆ ನುಗ್ಗಿ ಬುಟ್ಟಿಯಲ್ಲಿಟ್ಟಿದ್ದ ಪುಳ್ಳಂಗಾಯಿ ಉಂಡೆಗಳನ್ನೆಲ್ಲ ಪೂರೈಸಿ ಕಂಠಪೂರ್ತಿ ಹಾಲು ಕುಡಿದು ಹಾಸಿಗೆಮೇಲೆ ಬಿದ್ದುಕೊಂಡರಂತೆ, ನಿದ್ದೆಬಂದವರ ಹಾಗೆ ಗೊರಕೆ ಹೊಡೆಯುತ್ತ ಕಳ್ಳರು ಒಳಕ್ಕೆ ನುಗ್ಗಿದರು. ತಾತನ ತಲೆದಿಂಬಿನ ಕೆಳಗೆ ಕೈಆಡಿಸಿದರು—ಕಬ್ಬಿಣದ ಪೆಟ್ಟಿಗೆಯ ಕೀಗೊಂಚಲಿಗೆ! ತಾತ ಒಂದುಸಲ ಕೆಮ್ಮಿದರಂತೆ. ಪಂಜು ಆ ಕೂಡಲೇ ಆರಿಹೋಯಿತಂತೆ. ಆಗ ತಾತ ಛಂಗನೆ ಅವರಮೇಲೆ ಹುಲಿಯಂತೆ ಹಾರಿ ಕಳ್ಳರ ಜುಟ್ಟನ್ನು ಮುಷ್ಟಿಯಲ್ಲಿ ಬಿಗಿಹಿಡಿದು ಕೇಶರಾಶಿಯನ್ನು ಹೊಸದು, ಎಳೆದು ಎರಡು ತಲೆಗಳಿಗೂ, ಢಿಕ್ಕಿ ಹೊಡಸಲು ಪ್ರಾರಂಭಿಸಿದರು. ಸ್ವಲ್ಪ ಹೊತ್ತಿನಲ್ಲಿಯೇ ಜುಟ್ಟು ಬುರುಡೆಗಳಿಂದ ಕಿತ್ತುಬಂತು. ಆಗ ತಾತ ಕಳ್ಳರಕೈಲಿ ಭಜನೆಮಾಡಿಸಿದರಂತೆ—ಆಂಜನೇಯ ರಾಮನ ಭಂಟ; ತಿರುಪತಿ ಎಂಬುದು ವೈಕುಂಠ' ಅಂತ! ಹೀಗೆ ನಮ್ಮ ತಾತಮುತ್ತಾತಂದರು ಸಾಹಸಿಗಳು. ಕೀರ್ತಿಗಳಿಸಿದವರು. ವಂಶದ ಗೌರವ ಪ್ರತಿಷ್ಠೆಗಳನ್ನು ಬೆಳಗಿಸಿದವರು.

ನಮ್ಮ ಅಪ್ಪನ ಹೆಸರು 'ಹನುಮಂತಪ್ಪ' ಆದರೂ ಧೈರ್ಯ ಪರಾಕ್ರಮಗಳಾವುವೂ ಅವರಲ್ಲಿದ್ದುದು ನನ್ನ ಗಮನಕ್ಕೆ ಬರಲಿಲ್ಲ. ಊಟದ ವಿಚಾರದಲ್ಲಿ ಮಾತ್ರ ಅವರು ನಮ್ಮ ತಾತನನ್ನು ಹೋಲಿಕೊಂಡರು! ಶಕ್ತಿ ಸಾಮರ್ಥ್ಯಗಳಾವುವೂ ಅನುವಂಶೀಯವಾಗಿ ಬರಲಿಲ್ಲ. ಇದ್ದ ಆಸ್ತಿಯನ್ನೆಲ್ಲ ಕರಗಿಸಿ ಹೊಟ್ಟೆತುಂಬ ತಿಂದು ತೇಗಿ ಘಟ ಉರುಳಿಸಿದರು. ತಾತನ ಹೆಸರನ್ನು ಅವರು ಉಳಿಸಿದ್ದು ಹೀಗೆ.

ನಮ್ಮ ಕಾಲಕ್ಕೆ ಪಿತ್ರಾರ್ಜಿತವಾಗಿ ಉಳಿದಿದ್ದು ಅಂದರೆ 'ಕಿವುಡು' ಒಂದೆ. ನನ್ನ ಅಂಕಿತಾನೂ ಮನೆದೇವರದೇ. ಈಚೆಗೆ 'ಹನುಮಂತರಾವ್' ಅಂತ ತಿದ್ದಿಕೊಂಡಿದೇನೆ. ಹೊಟ್ಟೆ ಕಾಟಕ್ಕಾಗಿ ಮೇಷ್ಟರಾಗಿ ಸೇರಿಕೊಂಡು ಹುಡುಗರನ್ನು ಕಾಡಿಸುತ್ತೇನೆ. ನಿತ್ಯರೋಗ. ದಾರಿದ್ರ್ಯ. ಯಾವಾಗಲೂ ತಲೆ ಕೈಹೊತ್ತೇ ಇರುತ್ತೆ!

* * *

ಹುಟ್ಟುವ ಮಗು ಗಂಡಾದರೆ 'ನಿನ್ನ ಹೆಸರನ್ನೇ ಇಡುತ್ತೇನೆ' ಎಂದು ಅವಳು ಹರಕೆಹೊತ್ತಿದ್ದಳು ಮನೇದೇವರಿಗೆ! ಅವಳ ಆಸೆ ಪೂರೈಸಿತು. ಮಗುವನ್ನು ಅವಳು ಪ್ರೀತಿಯಿಂದ 'ಹನುಮ' ಎಂದು ತಬ್ಬಿದಳು. ನಾನೂ 'ಹನುಮ'ನನ್ನು ನೋಡಿದೆ. ಹಂಚಿಕಡ್ಡಿಗಿಂತಲೂ ಕಿರಿದಾದ ಕೈಕಾಲುಗಳು! ಆಳಾಗುವ ಲಕ್ಷಣಗಳೇ ಇಲ್ಲದ ಶರೀರ. ಆದರೆ ಒಂದು ವಿಶೇಷಮಾತ್ರ ಕಂಡುಬಂತು. ಮನೆದೇವರಾದ ಆ ಮಹಾಮಹಿಮ ವಾಯುಪುತ್ರ ತನ್ನ ಮೂತಿಯನ್ನು ಮಾತ್ರ "ಹನುಮ"ನಿಗೆ ಸಂಪೂರ್ಣವಾಗಿ ಅನುಗ್ರಹಿಸಿದ್ದ!

— ಹಾ. ರಾ.

ಪ ರಿ ಹಾ ರ

ಎಂದಿತು ಮುದುಕಿ :

"ತಲೆನೋವು, ಹಲ್ಲು ಹುಳುಕು, ಸಣ್ಣ ಜ್ವರ
ಕಾಲು ಎಲ್ಲ ಕಂಪನ; ತಡೆಯಲಾರೆ ಹಾಳು
ಗೋಳು; ಬೇಗ ಪರಮಾತ್ಮನ ಪಾದ ಸೇರಿದಷ್ಟು
ನನಗೂ ಹಾಯಿ; ನಿಮಗೂ ಹಾಯಿ; ಏಕೆ ಈ ಬೇಸರ"

ಎಂದ ವೈದ್ಯ :

"ಹೌದು ತಾಯಿ; ನನಗೂ ಹಾಯಿ, ನಿಮಗೂ ಹಾಯಿ,
ಕೆಂಪುನೀರು ಮೂರುಹೊತ್ತು; ಜೊತೆಗೆ ಮಾತ್ರೆ ಮೂರು
ಸಾರು ಅಲ್ಲ ಬಿಸಿನೀರು ಜತೆ ಮೂರುಬಾರಿ
ನನಗೂ ಸಾಕಾಗಿದೆ; ನಿಮ್ಮ ಈ ಹಾಳು ಬೋರು."

— ಅಷ್ಟಾವಕ್ರ.

“ಕೊರವನ ಬಾಲಬೋಧೆ”

(ಬಲಿತವರಿಗೆ)

ಗ್ರಹಣದ ಪಾಠ

ಸೂರ್ಯ.	**ಚಂದ್ರ**	**ನೆರಳು**	**ಗ್ರಹಣ.**
ಕಾರ್ಯ.	**ಆರ್ಯ**	**ಕೆರಳು**	**ಭ್ರಮಣ**

ಸೂರ್ಯ ಲೋಕಕ್ಕೆಲ್ಲಾ ಬೆಳಕು ಚೆಲ್ಲುತ್ತಾನೆ. ನಾವು ನಮ್ಮ ಕಾರ್ಯ-ಗಳನ್ನು ಮಾಡಿಕೊಳ್ಳ-ಬಹುದು. ಕಚೇರಿಗೆ ಹೋಗಿ ಕಾರ-ಕೂನನಿಗೆ ಕಾಫಿ ಉಣಿಸಿ, ಕಾರ್ಯ ಮಾಡಿ-ಕೊಳ್ಳ-ಬಹುದು. ನ್ಯಾಯಾ-ಸ್ಥಾನಕ್ಕೆ ನಡೆದು, ನಾಪಿತರಿಲ್ಲದೆ ಪಟ್ಟಾ-ಭಿಷೇಕ ಪಡೆಯು-ಬಹುದು. ವೈದ್ಯಾ-ಲಯಕ್ಕೆ ಹೋಗಿ, ವೈದ್ಯ-ರಲ್ಲಿ ವ್ಯವ-ಹಾರ ಮಾಡಿ ಲಯವಾಗ-ಬಹುದು ಬೆಳ-ಕಿದ್ದರೆ ಇದು ಚೆನ್ನ. ಕತ್ತಲಾ-ದರೆ ಯಾರಿಗೂ ಕಾಣಿಸುವುದಿಲ್ಲ. ಕಾರ್ಯ-ಕ್ಕೆಲ್ಲಾ ಸೂರ್ಯ ಕಾರಣ. ಅಲ್ಲಿ ನೋಡು! ಸೂರ್ಯ!!

ಚಂದ್ರನ ಬೆಳಕು ಹಾಲು ಚೆಲ್ಲಿ-ದಂತಿದೆ. ಬೆಳಕು ಉಂಟು. ಬಿಸಿ ಇಲ್ಲ. ಬೆಳ-ದಿಂಗಳಲ್ಲಿ ಆರ್ಯಗೆ ಕೋಪ ಕಡಿಮೆ. ಅಗೋ ನೋಡು! ಆರ್ಯ ಮೆಟ್ಟಲ ಮೇಲೆ ಕೂತಿ-ದ್ದಾನೆ! ಹೊಟ್ಟೆಗೆ ಹಿಟ್ಟು ಇಲ್ಲ. ಆರ್ಯಯ ಜುಟ್ಟಿಗೆ ಮಲ್ಲಿಗೆ ಮೊಗ್ಗು. ಶಶಾಂಕ ಯಾರು? ಮಂಕನ ಮಾವನೆ?

ಇಲ್ಲಿ ನೋಡು! ನೆರಳು ಎಷ್ಟು ಸೊಂಪಾಗಿದೆ. ಎಲೆಗಳ ಸಂದಿನ ನೆರಳೇ ಚೆನ್ನು! ಎಷ್ಟು ದುಂಡು! ಎಷ್ಟು ಚೆನ್ನು! ಆರ್ಯಯ ಗಲ್ಲದ ಗುಳಿ-ಯಂತಿದೆ.

ಈಗ ನೋಡು! ನೆರಳು ಕಪ್ಪು. ಎಲೆಗಳ ಸಂದಿನ ನೆರಳೇನಾಯ್ತು? ತುಟಿ ಬಿರಿದಂತೆ ಆಯ್ತೋ? ಚೌತಿ ಚಂದ್ರ-ನಂತೆ ಇದೆಯೋ? ಆರ್ಯಯು ನಕ್ಕಂತೆ ಹಾದೇ?

ಆರ್ಯನಿಗೆ ಕೋಪ, ಹೊಟ್ಟೆಗೆ ತಾಪ, ಯಾಕೆ ಕೋಪ? ನೆರಳು ನೋಡಿ ಕೆರಳಿದ. ಯಾಕೆ?

ಓಹೋ! ಸೂರ್ಯಗ್ರಹಣ, ಚಂದ್ರನ ನೆರಳು ಭೂಮಿಯಮೇಲೆ. ಚಂದ್ರ ಮುಖಿಯ ನೆರಳು ಅವನಮೇಲೆ. ಸೂರ್ಯ-ನಿಗೆ ಗ್ರಹಣ. ಆರ್ಯ-ನಿಗೂ ಗ್ರಹಣ. ಕಾಡಿನಲ್ಲಿ ಜನ. ಮೋಡ ಮುಚ್ಚಿತು. ಇದ್ದ-ವರಿಗೆ ಗ್ರಹಣ.

ಭ್ರಮಣ ಯಾರಿಗೆ?

ಹಾರುತಿತ್ತು ಹಕ್ಕಿ. ಹಾಡುತಿತ್ತು ಸೊಕ್ಕಿ. ನೆರಳು ಬಿತ್ತು. ಕೆರಳದಾಯ್ತು. ಗೂಡ ಹೊಕ್ಕಿತು.

ಗುರುಗುಟ್ಟಿತು ವ್ಯಾಘ್ರ. ಸರಿ-ಗಟ್ಟಿತು ವ್ಯಾಘ್ರಿಣಿ. ನೆರಳು ಬಿತ್ತು. ಬಾಲ ಮುದು-ರಿತು. ಗಂಟಲು ಒಣಗಿತು.

ಆಡುತ್ತಿತ್ತು ಹೆಡೆ. ಬೇಡುತ್ತಿತ್ತು ಕಪ್ಪೆ. ನೆರಳು ಬಿತ್ತು ಕೊರಳು ಮಲಗಿತು. ಕಪ್ಪೆ ಹಾರಿತು. ಕೆರೆ_ಯಲ್ಲಿ ಸಪ್ಪಳ_ವಾಯ್ತು.

ತುಂಬಿದಾಕೆ. ಕೋಣೆ ಕತ್ತಲೆ. ನಂಬಿದಾಕೆ.
ಶಹಣೆ. ಎತ್ತಲೂ ಕತ್ತಲು. ಕಗ್ಗತ್ತಲು.
ಪೈರು. ಜೇನು. ತುಂಬುವ ಒಡಲು.
ಭುವಿಯು. ಬಾನು. ನಂಬುವುದೇನು.
ಗ್ರಹಣ! ಗ್ರಹಣ!! ಭ್ರಮಣ ಯಾರಿಗೆ??
ಕಾಳು ಕಡ್ಡಿ, ಇದ್ದಂತಾ-ಗಲಿ.
ಬಾಳು ಅಡ್ಡಿ ನೆನೆದಂ-ತಾಗಲೀ.

ಹೇಳಿ ಬರೆಯಿಸಿ:—

ಸೂರ್ಯ ಚಂದ್ರ ಗ್ರಹಣ.
ಕಾರ್ಯ ಆರ್ಯ ಭ್ರಮಣ.

* * *

ಪ್ರಶ್ನೆ ಮಾಲೆ.

೧) ಸೂರ್ಯ ಏನು ಚೆಲ್ಲುತ್ತಾನೆ?
೨) ಕಾರಕೂನ ಏನು ಕುಡಿಯುತ್ತಾನೆ.
೩) ಹಾಲು ಚೆಲ್ಲಿದರೆ ಹೇಗಿರುತ್ತೆ?
೪) ಶಶಾಂಕನ ಮಾವ ಏನು ಆಗಿದ್ದಾನೆ
೫) ಸೂರ್ಯನ ಗ್ರಹಣ ಎಂದರೇನು
೬) ಆರ್ಯನ ಗ್ರಹಣ ಎಂದರೇನು?
೭) ಭ್ರಮಣ ಯಾರಿಗೆ.

* * *

ರಕ್ಷಣೆ ಮತ್ತು ಸೇವೆಗೆ

ಮೈಸೂರು ಸರ್ಕಾರದ ವಿಮಾ ಇಲಾಖೆಯಲ್ಲಿ
ವಿಮೆ ಮಾಡಲು ಈ ದಿನವೇ ನಿರ್ಧರಿಸಿರಿ.

ಅನೇಕ ವರ್ಷಗಳ ನಂಬಿಕೆ, ನಿರಂತರ ಸೇವೆ ಮತ್ತು ಸಹಕಾರಗಳನ್ನು ನೀಡಿ ತನ್ನದೇ ಆದ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ.

★ ಇಂಡಿಯಾದಲ್ಲೇ ಹೆಚ್ಚಿನ ದರದ ಬೋನಸ್ಸು.
ಹೋಲ್ ಲೈಫ್ 20 ರೂ ಗಳು
ಎಂಡೋಮೆಂಟ್ 17 ರೂ. ಗಳು.

★ ಸಮಸ್ತ ಜನರಿಗೂ ಅನುಕೂಲವಾಗುವಂಥ ಹೊಸ ಬಗೆಯ ವಿಮಾ ಪದ್ಧತಿಗಳನ್ನು ಜಾರಿಗೆ ತರಲಾಗಿದೆ.

★ 1955ನೇ ಇಸವಿ ಫೆಬ್ರುವರಿ 1ರಿಂದ ಪ್ರೀಮಿಯಂ ದರಗಳಲ್ಲಿ ಹೆಚ್ಚಿನ ಇಳಿತಾಯ.

ಇಲಾಖೆಗೆ ಪಾವತಿ ಮಾಡಬೇಕಾದ ಹಣವನ್ನು ಇಲಾಖೆಯ ಕ್ಯಾಷ್ ಸೆಕ್ಷನ್ನಿನಲ್ಲಿ ಸ್ವೀಕರಿಸಲಾಗುತ್ತದೆ.

ಹೆಚ್ಚಿನ ವಿವರಗಳಿಗೆ ಬರೆಯಿರಿ:....

ಸೆಕ್ರೆಟರಿ,

ಮೈಸೂರು ಸರ್ಕಾರದ ವಿಮಾ ಇಲಾಖೆ,

ಬೆಂಗಳೂರು.

ಅಥವಾ

ನಿಮ್ಮ ಹತ್ತಿರವಿರುವ ಏಜೆಂಟರನ್ನು ವಿಚಾರಿಸಿ.

Printed by B. S. Iyengar, Printer, Bangalore City.

Publisher—B. N. Gupta. Editor—M. Sivaram.